ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 176 RNI Number : KNKAN/25/A2770 04-07-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :176 ರಾಯಚೂರು 04-07-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಅಮರನಾಥಯಾತ್ರೆ ಏಕತೆಯ ಪ್ರತಿಬಿಂಬ-ಮೋದಿ

ನವದೆಹಲಿ, ಜು.3- ಪ್ರಧಾನಿ ನರೇಂದ್ರ ಮೋದಿ ಅವರು ಅಮರನಾಥ ಯಾತ್ರೆಯ ಭಕ್ತರಿಗೆ ವಿಶೇಷ ಪತ್ರ ಬರೆದಿದ್ದು, ವಾರ್ಷಿಕ ಯಾತ್ರೆಯನ್ನು ಒಂದು ದೊಡ್ಡ ಆಶೀರ್ವಾದ ಎಂದು ಬಣ್ಣಿಸಿದ್ದಾರೆ ಮತ್ತು ಯಾತ್ರಿಕರು ತಮ ಆಧ್ಯಾತಿಕ ಪ್ರಯಾಣವನ್ನು ಸ್ವಚ್ಛತೆ, ಸುರಕ್ಷತೆ, ಸ್ಥಳೀಯ ಜೀವನೋಪಾಯ, ಪರಿಸರ ಸಂರಕ್ಷಣೆ ಮತ್ತು ರಾಷ್ಟ್ರ ನಿರ್ಮಾಣದ ಕಡೆಗೆ ಸಾಮೂಹಿಕ ಬದ್ಧತೆಯಾಗಿ ಪರಿವರ್ತಿಸಿಕೊಳ್ಳುವಂತೆ ಕರೆ ನೀಡಿದ್ದಾರೆ.

ಗೌರವಾನ್ವಿತ ಪ್ರಧಾನ ಮಂತ್ರಿಗಳಿಂದ ಯಾತ್ರಿಕರಿಗೆ ಪತ್ರ ಎಂಬ ಎರಡು ಪುಟಗಳ ಸಂದೇಶದಲ್ಲಿ, ಪ್ರಧಾನಿ ಮೋದಿ ಭಕ್ತರನ್ನು ಹರ ಹರ ಮಹಾದೇವ್ ಮತ್ತು ಜೈ ಬಾಬಾ ಬರ್ಫಾನಿ ಎಂದು ಸ್ವಾಗತಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿರುವ ಅಮರನಾಥ ಗುಹಾ ದೇವಾಲಯಕ್ಕೆ ಪವಿತ್ರ ಯಾತ್ರೆ ಭಾರತದ ಶಾಶ್ವತ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಪ್ರತಿನಿಧಿಸುತ್ತದೆ ಎಂದು ಹೇಳಿದರು.ಜಮ್ಮು ಮತ್ತು ಕಾಶ್ಮೀರದಲ್ಲಿ ಪವಿತ್ರ ಅಮರನಾಥ ಯಾತ್ರೆಯಲ್ಲಿ ಭಾಗವಹಿಸುವುದು ಸ್ವತಃ ಒಂದು ದೊಡ್ಡ ಆಶೀರ್ವಾದ ಎಂದು ಪ್ರಧಾನಿ ಬರೆದಿದ್ದಾರೆ, ಪ್ರತಿ ವರ್ಷ ದೇಶಾದ್ಯಂತದ ಭಕ್ತರು ಯಾತ್ರೆ ಕೈಗೊಳ್ಳುವ ಅವಕಾಶಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ ಎಂದು ಹೇಳಿದರು.

ಈ ಯಾತ್ರೆಯನ್ನು ಭಾರತದ ಆಧ್ಯಾತ್ಮಿಕ ಸಂಪ್ರದಾಯದಲ್ಲಿ ಶಾಶ್ವತ ಅಧ್ಯಾಯ ಎಂದು ಕರೆದ ಪ್ರಧಾನಿ ಮೋದಿ, ವಿವಿಧ ಪ್ರದೇಶಗಳು, ಭಾಷೆಗಳು ಮತ್ತು ಸಂಪ್ರದಾಯಗಳ ಭಕ್ತರು ಶಿವನ ಮೇಲಿನ ಹಂಚಿಕೆಯ ಭಕ್ತಿಯೊಂದಿಗೆ ಒಟ್ಟುಗೂಡುವುದರಿಂದ ಇದು ದೇಶದ ವೈವಿಧ್ಯತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ವಿವಿಧ ರಾಜ್ಯಗಳ ಜನರು, ವಿವಿಧ ಭಾಷೆಗಳನ್ನು ಮಾತನಾಡುತ್ತಾರೆ ಮತ್ತು ವೈವಿಧ್ಯಮಯ ಸಂಪ್ರದಾಯಗಳನ್ನು ಅನುಸರಿಸುತ್ತಾರೆ, ಮಹಾದೇವನ ಮೇಲಿನ ತಮ್ಮ ಭಕ್ತಿಯಿಂದ ಈ ಪ್ರಯಾಣವನ್ನು ಪೂರ್ಣಗೊಳಿಸುತ್ತಾರೆ ಎಂದು ಅವರು ಬರೆದಿದ್ದಾರೆ.

ಯಾತ್ರೆಯ ಸುಗಮ ನಡವಳಿಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಶ್ರೀ ಅಮರನಾಥಜಿ ದೇಗುಲ ಮಂಡಳಿ, ಜಮ್ಮು ಮತ್ತು ಕಾಶ್ಮೀರ ಆಡಳಿತ ಮತ್ತು ಭದ್ರತಾ ಸಂಸ್ಥೆಗಳು ವಹಿಸಿದ ಪಾತ್ರವನ್ನು ಪ್ರಧಾನಿಯವರು ಶ್ಲಾಘಿಸಿದರು.ಹಲವಾರು ದಶಕಗಳಿಂದ, ಶ್ರೀ ಅಮರನಾಥಜಿ ದೇಗುಲ ಮಂಡಳಿ ಮತ್ತು ಜಮ್ಮು ಮತ್ತು ಕಾಶ್ಮೀರ ಆಡಳಿತವು ಈ ತೀರ್ಥಯಾತ್ರೆಯನ್ನು ಉತ್ತಮ ದಕ್ಷತೆ ಮತ್ತು ಸಮರ್ಪಣಾಭಾವದಿಂದ ನಿರ್ವಹಿಸಿದೆ ಎಂದು ಪ್ರಧಾನಿ ಮೋದಿ ಹೇಳಿದರು.



ಯಾತ್ರಿಕರಿಗೆ ನೀಡಿದ ಸೇವೆಗಾಗಿ ಅವರು ಭಾರತೀಯ ಸೇನೆ, ಸಿಆರ್‌ಪಿಎಫ್, ಜಮ್ಮು ಮತ್ತು ಕಾಶ್ಮೀರ ಪೊಲೀಸ್, ಐಟಿಬಿಪಿ, ಬಿಎಸ್‌ಎಫ್, ಎನ್‌ಡಿಆರ್‌ಎಫ್, ಆರೋಗ್ಯ ಕಾರ್ಯಕರ್ತರು, ವೈದ್ಯರು, ನೈರ್ಮಲ್ಯ ಕಾರ್ಯಕರ್ತರು, ಆಡಳಿತ ಅಧಿಕಾರಿಗಳು ಮತ್ತು ಸ್ವಯಂಸೇವಕರನ್ನು ಮತ್ತಷ್ಟು ಶ್ಲಾಘಿಸಿದರು.

ಈ ವರ್ಷವೂ ಸಾವಿರಾರು ಸಿಬ್ಬಂದಿ ಈ ಜವಾಬ್ದಾರಿಯನ್ನು ಬದ್ಧತೆಯಿಂದ ನಿರ್ವಹಿಸುತ್ತಿದ್ದಾರೆ ಎಂದು ಅವರು ಗಮನಿಸಿದರು.ಸ್ಥಳೀಯ ಸಮುದಾಯಗಳ ಪಾತ್ರವನ್ನು ಎತ್ತಿ ತೋರಿಸಿದ ಪ್ರಧಾನಿ ಮೋದಿ, ಈ ಯಾತ್ರೆಯು ಜಮ್ಮು ಮತ್ತು ಕಾಶ್ಮೀರದ ಜನರ ಆತಿಥ್ಯವನ್ನು ಸಹ ಪ್ರದರ್ಶಿಸುತ್ತದೆ ಎಂದು ಹೇಳಿದರು.

ಸವಾಲಿನ ಪರ್ವತ ಮಾರ್ಗದಲ್ಲಿ ಭಕ್ತರಿಗೆ ಸಹಾಯ ಮಾಡುವ ಕುದುರೆ ನಿರ್ವಾಹಕರು, ಪೋರ್ಟರ್‌ಗಳು ಮತ್ತು ಪಲ್ಲಕ್ಕಿ ಹೊರುವವರ ಬಗ್ಗೆ ಅವರು ವಿಶೇಷವಾಗಿ ಉಲ್ಲೇಖಿಸಿದರು, ಅವರ ಕೊಡುಗೆಯನ್ನು ಭಾರತದ ಪ್ರಾಚೀನ ಸಂಪ್ರದಾಯದ ನಿಸ್ವಾರ್ಥ ಸೇವೆಯ ಅಭಿವ್ಯಕ್ತಿ ಎಂದು ಬಣ್ಣಿಸಿದರು.

ಬಸವನಭಾವಿ ವೃತ್ತ ಸೌಂದರಿಕರಣ ಶೀಲಾ ಮಂಟಪ ನಿರ್ಮಾಣದ ಕಾಮಗಾರಿಗೆ ಚಾಲನೆ

ಧರ್ಮ ಪತ್ನಿ ಪಾರ್ವತಮ್ಮ ಹೆಸರಲ್ಲಿ ಭವ್ಯ ಕಲ್ಲಿನ ಶೀಲಾ ಮಂಟಪ ನಿರ್ಮಾಣ-ಪಾಪಾರೆಡ್ಡಿ



ರಾಯಚೂರು,ಜು.3-

ಮುಂಗಾರು ಸಾಂಸ್ಕೃತಿಕ ಹಬ್ಬದ ಪರಂಪರೆ ರಕ್ಷಣೆ ರೈತನ ಜೋಡಿ ಎತ್ತು, ಬಸವಣ್ಣ ಹಾಗೂ ಮುನ್ನೂರು ಕಾಪು ಸಮಾಜದ ವಂಶಸ್ಥರಾದ ಶ್ರೀಕೃಷ್ಣದೇವರಾಯ ಶೀಲಾ ಮಂಟಪ ನಿರ್ಮಾಣಕ್ಕೆ

ಮುನ್ನೂರುಕಾಪು ಸಮಾಜದ ಹಿರಿಯ ಮುಖಂಡರು ಹಾಗೂ ಮಾಜಿ ಶಾಸಕರಾದ ಎ.ಪಾಪಾರೆಡ್ಡಿ ಅವರು ಭವ್ಯ ನಿರ್ಮಾಣಕ್ಕೆ ಚಾಲನೆ ನೀಡಿದರು.

ಮಾಜಿ ಶಾಸಕರಾದ ಎ.ಪಾಪರೆಡ್ಡಿ ಅವರು ತಮ್ಮ ಸ್ವಂತ 37 ಲಕ್ಷ ವೆಚ್ಚದಲ್ಲಿ ಬಸವಣ್ಣ ವೃತ್ತವನ್ನು ಸೌಂದರೀಕರಣ ನಿರ್ಮಾಣಕ್ಕೆ ಕಲ್ಲಿನ ಪೂಜಾ ಕಾರ್ಯಕ್ರಮವು ನೆರೆವೇರಿಸಲಾಯಿತು.ಪಾಪಾರೆಡ್ಡಿ ಹಾಗೂ ಸಮಾಜದ ಅಧ್ಯಕ್ಷರು ಬೆಲ್ಲಂ ನರಸರೆಡ್ಡಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಮುಂಗಾರು ಸಾಂಸ್ಕೃತಿಕ ರಾಯಚೂರು ಹಬ್ಬದ ಮೂಲಕ ರಾಜ್ಯದಲ್ಲಿ ಮಾದರಿ ಸಮಾಜ ಎಂದು ಖ್ಯಾತಿಗೆ ಗುರಿಯಾಗಿದೆ. ಈಗಾಗಲೇ ಬಸವಣಬಾವಿ ವೃತ್ತದಲ್ಲಿ ರೈತನ ಜೋಡೆತ್ತು,ಬಸವಣ್ಣ ಹಾಗೂ ಶ್ರೀಕೃಷ್ಣದೇವರಾಯ ಮೂರ್ತಿ ಸ್ಥಾಪನೆ ಮಾಡಲಾಗಿದೆ. ಇದನ್ನು ಸೌಂದರೀಕರಣ ಮಾಡಲು ಕಲ್ಲಿನ ಭವ್ಯ ಮಂಟಪವನ್ನು ನಿರ್ಮಾಣಕ್ಕೆ ಚಾಲನೆ ನೀಡಿದರು. ನಂತರ ಮಾಜಿ ಶಾಸಕರು ಪಾಪಾರೆಡ್ಡಿ ಅವರು ಮಾತನಾಡಿ, ಮುನ್ನೂರು ಕಾಪು ಸಮಾಜ ರಾಯಚೂರಿನ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದೆ. ಬಸವಭಾವಿ ವೃತ್ತದಲ್ಲಿ ರೈತನ ಜೋಡೆತ್ತು, ಬಸವಣ್ಣ ಹಾಗೂ ಶ್ರೀಕೃಷ್ಣದೇವರಾಯು ಮೂರ್ತಿಯನ್ನು ಸೌಂದರೀಕರಣ ಮಾಡಲು ನನ್ನ ಧರ್ಮ ಪತ್ನಿ ಪಾರ್ವತಮ್ಮ ಹೆಸರಲ್ಲಿ 37 ಲಕ್ಷ್ಮ ವೆಚ್ಚದಲ್ಲಿ ಕಲ್ಲಿನ ಭವ್ಯ ಮಂಟಪ ನಿರ್ಮಾಣ ಮಾಡಲಾಗುತ್ತಿದೆ. ಇದೇ ರೀತಿ ಧರ್ಮ ಪತ್ನಿ ಹೆಸರಲ್ಲಿ ರಾಯಚೂರಿನ ಪ್ರಸಿದ್ಧ ಹಾಗೂ ಪುರಾತನ ಕಾಲದ ರಾಯಚೂರು ಯಲ್ಲಮ್ಮ ದೇವಸ್ಥಾನ ಜೀರ್ಣೋದ್ಧಾರಕ್ಕೆ 50 ಲಕ್ಷ ವೆಚ್ಚದಲ್ಲಿ ಕಲ್ಲಿನಿಂದ ಭವ್ಯ ದೇವಸ್ಥಾನ ನಿರ್ಮಾಣ ಮಾಡಲಾಗುತ್ತಿದೆ.ಮುನ್ನೂರು ಕಾಪು ಸಮಾಜದ ವಂಶಸ್ಥರಾದ ಶ್ರೀ ಕೃಷ್ಣದೇವರಾಯ ಅವರ ಮಾದರಿಯಲ್ಲಿ ನನ್ನ ಧರ್ಮ ಪತ್ನಿ ಪಾರ್ವತಮ್ಮ ಅವರ ಸವಿ ನೆನಪುಗಾಗಿ ಕಲ್ಲಿನಿಂದ ಭವ್ಯ ...

3ನೇ ಪುಟ.....

ಪಶ್ಚಿಮ ಠಾಣೆ: ಪಿಎಸ್‌ಐಗೆ ಪ್ರಶಂಸನೀಯ ಪತ್ರ

ರಾಯಚೂರು, ಜು. 3-

ಜಿಲ್ಲೆಯಲ್ಲಿನ ಸಾರ್ವಜನಿಕರ ಹಿತಾಸಕ್ತಿಗೆ ಸಂಬಂಧಿಸಿದಂತೆ ಪಶ್ಚಿಮ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳನ್ನು 24 ಗಂಟೆಗಳಲ್ಲಿ ಪತ್ತೆಹಚ್ಚಿ ನ್ಯಾಯಾಂಗ ಬಂಧನಕ್ಕೆ ಕಳುಹಿಸುವಲ್ಲಿ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿದ ಪಿಎಸ್ ಐ ಅವರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಅರುವಾಂಗ್ಲು ಗಿರಿ ಅವರು ಪ್ರಶಂಸನೀಯ ಪತ್ರ ನೀಡಿದರು.

ಇಲಾಖೆಗೆ ಗೌರವ ತರುವ ಕಾರ್ಯ ಈ ಕರ್ತವ್ಯನಿಷ್ಠೆ, ಸಮಯ ಪ್ರಜ್ಞೆ ಮತ್ತು ಸೇವಾಮನೋಭಾ ವವನ್ನು ಮೆಚ್ಚುತ್ತಾ ಮುಂದಿನ



ದಿನಗಳಲ್ಲಿಯು ಕೂಡ ಇದೇ ರೀತಿಯಲ್ಲಿ ಕರ್ತವ್ಯ ನಿರ್ವಹಿಸುವಂತೆ ಹಾಗೂ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಇತರರಿಗೂ ಪ್ರೇರಣೆಯಾಗುವಂತೆ ಮತ್ತು ಇಲಾಖೆಯ ಗೌರವ ಹೆಚ್ಚಿಸಿರುವ ಹಿನ್ನಲೆಯಲ್ಲಿ ಪತ್ರ ನೀಡಿದ್ದಾರೆ.

ನಿಸ್ವಾರ್ಥತೆಯ ಕಾರುಣ್ಯಾಶ್ರಮದ ಸೇವೆಯ ಜೊತೆ ಗುತ್ತೇದಾರ ಕುಟುಂಬ ಸದಾವಕಾಲವಿರುತ್ತದೆ ರಾಜೇಶ



ಸಿಂಧನೂರು,ಜು.3-

ತಾಲೂಕಿನ ಕುರುಕುಂದ ಗ್ರಾಮದ ದಿ. ಹನುಮಯ್ಯ ಗುತ್ತೇದಾರ ಅವರ ದ್ವಿತೀಯ ವರ್ಷದ ಪುಣ್ಯರಾದ ಕಾರ್ಯಕ್ರಮವನ್ನು ಸಿಂಧನೂರು ನಗರದ ಕಾರುಣ್ಯ ನೆಲೆ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ದಿ. ಹನುಮಯ್ಯ ಗುತ್ತೇದಾರ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಪ್ರವೀಣ್ ಕುಮಾರ್ ಗುತ್ತೇದಾರ ಅವರಿಗೆ ಕಾರುಣ್ಯ ಆಶ್ರಮದ ವತಿಯಿಂದ ಗೌರವಿಸಿ ಆಶೀರ್ವದಿಸಲಾಯಿತು. ಈ ಕಾರ್ಯಕ್ರಮದಲ್ಲಿ ರಾಜೇಶ ಮಾತನಾಡಿ ಕಾರುಣ್ಯ ಆಶ್ರಮದ ಸೇವೆಯು ಬರೀ ಅನಾಥ ಕ್ಷೇತ್ರದಲ್ಲಿ ಅಲ್ಲದೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡ ಸೇವೆ ಸಲ್ಲಿಸುತ್ತಿರುವುದು ನಮ್ಮ ಸಿಂಧನೂರಿಗೆ ಕೀರ್ತಿ ತಂದುಕೊಟ್ಟಿದೆ.

ಆಶ್ರಮಕ್ಕೆ ಬರುವ ದಾರಿಗಳು ಒಮ್ಮೆ ಸಹಾಯ ಮಾಡಿ ಹೋಗುತ್ತಾರೆ ಆದರೆ ನಿರಂತರ ದೈನಂದಿನ ಕಾರುಣ್ಯಾಶ್ರಮದ ಬದುಕು ಆಶ್ಚರ್ಯಕರ ಸೇವೆಯಾಗಿದೆ. ಅದೆಷ್ಟೋ ಸಮಾಜ ಸೇವಕರುಗಳಿಗೆ ಪೂರ್ತಿಯಾಗಿ ಕರುಣೆಯ ಕಂಪನವಾಗಿದೆ ಕಾರುಣ್ಯ ಆಶ್ರಮದ ಸೇವಾಕಾರ್ಯ ನಿಸ್ವಾರ್ಥತೆಯ ಕಾರುಣ್ಯಾಶ್ರಮದ ಸೇವೆಯ ಜೊತೆ ಗುತ್ತೇದಾರ ಕುಟುಂಬ ಸದಾವಕಾಲವಿರುತ್ತದೆ. ಇಂದು ನಮ್ಮ ದಿ.ಹನುಮಯ್ಯ ಗುತ್ತೇದಾರ ಅವರ ಪುಣ್ಯಾರಾಧನೆಯು ಕಾರುಣ್ಯ ಆಶ್ರಮದಲ್ಲಿ ಅರ್ಥಪೂರ್ಣವಾಗಿ ನೆರವೇರಿರುವುದು ನಮಗೂ ಹಾಗೂ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಾರ್ಯವಾಗಿದೆ. ನಿಜವಾದ ಅನ್ನದಾನವೆಂದರೆ

3ನೇ ಪುಟ.....

ಹಂಗಾಮಿನ ಬೆಳೆಗಳಿಗೆ ಬಲದಂಡೆ ಮತ್ತು ಎಡದಂಡೆ ನಾಲೆಯಲ್ಲಿ ನೀರು ಹರಿಸಲು ಸಾಧ್ಯವಾಗುವುದಿಲ್ಲ

ರಾಯಚೂರು ಜು.03

ತುಂಗಭದ್ರಾ ಜಲಾನಯನ ಪ್ರದೇಶ ವ್ಯಾಪ್ತಿಯಲ್ಲಿ ಪ್ರಸ್ತುತ ಮಳೆ ಕೊರತೆಯಿಂದಾಗಿ ತುಂಗಭದ್ರಾ ಜಲಾಶಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಸಂಗ್ರಹವಾಗಿರುವುದಿಲ್ಲ. ಆದಕಾರಣ ಮುಂಗಾರು ಹಂಗಾಮಿನ ಬೆಳೆಗಳಿಗೆ ಬಲದಂಡೆ ಮತ್ತು ಎಡದಂಡೆ ನಾಲೆಯಲ್ಲಿ ನೀರು ಹರಿಸಲು ಸಾಧ್ಯವಾಗುವುದಿಲ್ಲವೆಂದು ಮತ್ತು ಜಲಾಶಯದಲ್ಲಿ ಸಂಗ್ರಹವಾಗಿರುವ ನೀರನ್ನು ಕುಡಿಯಲು ಮಾತ್ರ ಬಳಸಲು ಸರ್ಕಾರದ ಆದೇಶವಾಗಿರುವ

3ನೇ ಪುಟ.....



ಬೋಸರಾಜು ಅವರಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ರಾಯಚೂರು, ಜು. 3: ರಾಯಚೂರು ಜಿಲ್ಲೆಯ ಸಮಗ್ರ ಅಭಿವೃದ್ಧಿ ಹಾಗೂ ದೇವರಾಜ ಅರಸ್ ಟ್ರಕ್ ಟರ್ಮಿನಲ್‌ಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವ ಉದ್ದೇಶದಿಂದ ಸಚಿವ ಸಂಪುಟ ವಿಸ್ತರಣೆಯಲ್ಲಿ ರಾಯಚೂರಿನ ಹಿರಿಯ ನಾಯಕ ಎನ್.ಎಸ್. ಬೋಸರಾಜು ಅವರಿಗೆ ಸಚಿವ ಸ್ಥಾನ ನೀಡಿ, ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ನೇಮಕ ಮಾಡಬೇಕೆಂದು ಲಾರಿ ಓನರ್ಸ್ ವೆಲ್‌ಫೇರ್ ಅಸೋಸಿಯೇಶನ್ ಒತ್ತಾಯಿಸಿದೆ.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸಂಘದ ನಿರ್ದೇಶಕರಾದ ಸೈಯದ್ ಯೂನುಸ್ ಸಲೀಂ ಮಾತನಾಡಿ, ಕಳೆದ 20 ವರ್ಷಗಳಿಂದ ಲಾರಿ ಮಾಲೀಕರ ಪ್ರಮುಖ ಬೇಡಿಕೆಯಾಗಿದ್ದ ಟ್ರಕ್ ಟರ್ಮಿನಲ್‌ಗಾಗಿ ರಾಯಚೂರಿನ ಸಮೀಪ 10 ಎಕರೆ ಜಮೀನು ಹಸ್ತಾಂತರಗೊಂಡಿದ್ದು, ಅದರ ಅಭಿವೃದ್ಧಿಗೆ ಸುಮಾರು ₹2.20 ಕೋಟಿ ಅನುದಾನ ಮಂಜೂರಾಗಿದೆ ಎಂದು ತಿಳಿಸಿದರು.

ರಾಯಚೂರು ಕಾಟನ್ ಮಿಲ್ಲರ್ಸ್ ಅಸೋಸಿಯೇಶನ್ ಅಧ್ಯಕ್ಷ ವಿ. ಲಕ್ಷ್ಮೀ ರೆಡ್ಡಿ ಅವರ ಸಹಕಾರದಿಂದ ಟ್ರಕ್ ಟರ್ಮಿನಲ್‌ಗೆ ಸೂಕ್ತ ಸ್ಥಳ ಗುರುತಿಸಲು ಸಾಧ್ಯವಾಗಿದೆ. ಈ ಟರ್ಮಿನಲ್ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಯಾದರೆ

3ನೇ ಪುಟ.....

ಗ್ರಾಮೀಣ ಭಾಗದ ಅಭಿವೃದ್ಧಿಗೆ ಮೊದಲ ಆದ್ಯತೆ: ಜಿ.ಪಂ ಸಿಇಒ ಈಶ್ವರ ಕುಮಾರ್



ರಾಯಚೂರು,ಜು.03

ಕೇಂದ್ರ ಸರ್ಕಾರದ ಪುರಸ್ಕೃತ ಹೊಸ ಯೋಜನೆ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಅಜೀವಿಕ ಮಿಷನ್ ಜುಲೈ 01ರಿಂದ ಜಾರಿಗೆ ಬಂದಿದ್ದು, ಜಿಲ್ಲೆಯಲ್ಲಿಯೂ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಜಿಲ್ಲೆಯ ಗ್ರಾಮೀಣ ಭಾಗದ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಅವರು ತಿಳಿಸಿದ್ದಾರೆ.

ಅರ್ಹ ಗ್ರಾಮೀಣ ಕುಟುಂಬಕ್ಕೆ ಇನ್ನುಂದೆ 100 ದಿನಗಳ ಬದಲಾಗಿ 125 ಮಾನವ ದಿನಗಳ ಕಡ್ಡಾಯ ಉದ್ಯೋಗ ಕಲ್ಪಿಸುವ ಜೊತೆಗೆ ಗ್ರಾಮೀಣ ಪ್ರದೇಶದ ಸಮಗ್ರ ಮತ್ತು ಸ್ಯಾಚುರೇಷನ್ ಆಧಾರಿತ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು.

ಯೋಜನೆಯ ಅನುಷ್ಠಾನಕ್ಕೆ ಸಂಬಧಿಸಿದತೆ ಜಿಲ್ಲೆಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು (ಗ್ರಾ,ಉ), ಅನುಷ್ಠಾನ ಇಲಾಖೆಗಳ ಅಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತಾಂತ್ರಿಕ ಸಿಬ್ಬಂದಿ ಸೇರಿದಂತೆ ಎಲ್ಲ ಹಂತದ ಅಧಿಕಾರಿ ಸಿಬ್ಬಂದಿಗಳಿಗೆ ಈಗಾಗಲೇ ಮಾಸ್ಟರ್ ಟ್ರೇನರ್ ಗಳಿಂದ ತರಬೇತಿಯನ್ನು ನೀಡಲಾಗಿದೆ.

ಹೊಸ ಯೋಜನೆಯಡಿ ಗ್ಯಾರಂಟಿ ಕಾರ್ಡ್ ನೀಡುವವರಿಗೆ ಮನರೇಗಾ ಯೋಜನೆಯಡಿ ನೀಡಲಾಗಿದ್ದ ಉದ್ಯೋಗ ಚೀಟಿಗಳನ್ನೇ ಮಾನ್ಯ ಮಾಡಿ, ಆಸಕ್ತರಿಗೆ ಕೆಲಸ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಜೂನ್ 30ರ ವರೆಗೆ ಮನರೇಗಾ ಯೋಜನೆಯಡಿ ಪ್ರಗತಿಯಲ್ಲಿದ್ದ ಕಾಮಗಾರಿಗಳಲ್ಲಿ ವಿಬಿ-ಜಿ ರಾಮ್-ಜಿ ಯೋಜನೆ ನಿಯಮಕ್ಕೆ ಒಳಪಟ್ಟ ಕಾಮಗಾರಿಗಳನ್ನು ತಡೆರಹಿತವಾಗಿ ಮುಂದುವರೆಸಲು ಅವಕಾಶವಿದ್ದು, ಯೋಜನೆ ಬದಲಾಗುತ್ತಿರುವ ಕಾರಣಕ್ಕಾಗಿ ಯಾವೊಬ್ಬ ಕೂಲಿಕಾರರು ಒಂದು ದಿನವೂ ಉದ್ಯೋಗ ಅವಕಾಶದಿಂದ ವಂಚಿತರಾಗುವ ಪ್ರಮೇಯ ಎದುರಾಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಯಂತೆ ನೊಂದಾಯಿತ ಎಲ್ಲ ಕೂಲಿಕಾರರ ಇ-ಕೆವೈಸಿ ಕಡ್ಡಾಯವಾಗಿ ರುವುದರಿಂದ ಬಾಕಿ ಉಳಿದಿರುವ ಕೂಲಿಕಾರರ ಇ-ಕೆವೈಸಿ ಪ್ರಕ್ರಿಯೆ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ.

ಹೊಸ ಕಾಯಿದೆಯಡಿ ನಿಯಮಾನುಸಾರ ಎಲ್ಲ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯೋಜನೆ ಜಾರಿಗೆ ತರಲು ಸೂಚನೆ ನೀಡಲಾಗಿದ್ದು, ಗ್ರಾಮೀಣ ಭಾಗದ ಎಲ್ಲ ಕೂಲಿಕಾರರು ಕೆಲಸ ಅರಸಿ ದೂರದ ಪಟ್ಟಣಗಳಿಗೆ ವಲಸೆ ಹೋಗದೆ ಸ್ವಂತ ಊರಿನಲ್ಲಿಯೇ ಹೊಸ ಯೋಜನೆಯಡಿ ಕೂಲಿ ಕೆಲಸ ಮತ್ತು ಜೀವನೋಪಾಯ ಸೌಲಭ್ಯ ಪಡೆದುಕೊಳ್ಳಬೇಕು. ಆ ಮೂಲಕ ಸರ್ಕಾರದಿಂದ ಜಾರಿಗೆ ತರಲಾದ ಜನಪರ

3ನೇ ಪುಟ.....

ಅಗ್ನಿಶಾಮಕ ದಳದಿಂದ ಅಣುಕು ಪ್ರದರ್ಶನ

ರಾಯಚೂರು ಜುಲೈ 03

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜುಲೈ02ರಂದು ಅಗ್ನಿ ಮುಂಜಾಗ್ರತಾ ಕ್ರಮಗಳ ಬಗ್ಗೆ ಅರಿವು ಮೂಡಿಸಲು ಮಾಕ್‌ಡ್ರಿಲ್ ಪ್ರದರ್ಶನವನ್ನು ಹಮ್ಮಿಕೊಳ್ಳಲು ಸೂಚಿಸಿರುವುದರಿಂದ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರವೀಂದ್ರ ಎ ಘಾಟಗೆ ಹಾಗೂ ಅಗ್ನಿಶಾಮಕ ಠಾಣಾಧಿಕಾರಿ ರಾಜು ಅವರು ನೇತೃತ್ವದಲ್ಲಿ ರಾಯಚೂರಿನ ನವೋದಯ ಸೆಂಟ್ರಲ್ ಶಾಲೆಯ 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಹಾಗೂ 50 ಶಿಕ್ಷಕರಿಗೆ ಅಗ್ನಿ ಅನಾಹುತಗಳ ಬಗ್ಗೆ ಅಣುಕು ಪ್ರದರ್ಶನವನ್ನು ತೋರಿಸಿ ಹಾಗೂ ಜಾಗೃತಿ ಮೂಡಿಸಿ ಮತ್ತು ಮುನ್ನಚ್ಚರಿಕೆ ಕ್ರಮಗಳ ಕುರಿತು ಮಾಕ್‌ಡ್ರಿಲ್ ಹಮ್ಮಿಕೊಳ್ಳಲಾಯಿತು.

ಇದೇ ಸಂದರ್ಭದಲ್ಲಿ ಠಾಣೆಯ ಸಿಬ್ಬಂದಿಗಳು, ನವೋದಯ ಸೆಂಟ್ರಲ್ ಶಾಲೆಯ ಮುಖ್ಯಗುರು, ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.







ಬಳ್ಳಾರಿಯ ಶ್ರೀರಾಂಪುರ ಕಾಲೋನಿಯ ಸರ್ಕಾರಿ ಶಾಲೆಗೆ ಜಿಲ್ಲಾಧಿಕಾರಿ ಭೇಟಿ ಪರಿಶೀಲನೆ

ಬಳ್ಳಾರಿ,ಜು.02-

ನಗರದ ಶ್ರೀರಾಂಪುರ ಕಾಲೋನಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಬುಧವಾರ ಸಂಜೆ ಭೇಟಿ ನೀಡಿ ಕಟ್ಟಡ, ತಡೆಗೋಡೆ, ಮೈದಾನ ಸೇರಿದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಸೌಲಭ್ಯಗಳು ಹಾಗೂ ಶಾಲಾ ಮೂಲಸೌಕರ್ಯಗಳ ಬಗ್ಗೆ ಪರಿಶೀಲನೆ ನಡೆಸಿದರು.

ಸ್ವಚ್ಛತೆ ಮತ್ತು ಗುಣಮಟ್ಟಕ್ಕೆ ಆದ್ಯತೆ ನೀಡಲು ಸೂಚನೆ: ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣದ ಜೊತೆಗೆ ಸುರಕ್ಷಿತ ಮತ್ತು ಸ್ವಚ್ಛ ವಾತಾವರಣ ಕಲ್ಪಿಸುವುದು ಸರ್ಕಾರದ ಆದ್ಯತೆಯಾಗಿದೆ. ಶಾಲಾ ಆವರಣದಲ್ಲಿ ಎಲ್ಲೂ ಕಸ ಕಡ್ಡಿಗಳು ಇರದಂತೆ ನಿರಂತರ ಸ್ವಚ್ಛತೆ ಕಾಪಾಡಬೇಕು. ಮೈದಾನದ ಸುತ್ತಲೂ ಗಿಡಗಳನ್ನು ನೆಟ್ಟು ಪೋಷಿಸಬೇಕು. ಬೇಕಾದ ಅಗತ್ಯ ಮೂಲ ಸೌಲಭ್ಯಗಳನ್ನು ಬಳಸಿಕೊಂಡು ಅಭಿವೃದ್ಧಿಪಡಿಸುವ ಮೂಲಕ ಮಾದರಿ ಶಾಲೆಯನ್ನಾಗಿಸಬೇಕು ಎಂದು ಶಾಲಾ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಶಾಲೆಯಲ್ಲಿ 16 ಸುಸಜ್ಜಿತ ಅತ್ಯಾಧುನಿಕ ತರಗತಿ ಕೊಠಡಿಗಳು, 3 ಲ್ಯಾಬ್, 4 ಶೌಚಾಲಯಗಳು ಇದ್ದು, ಶಾಲೆಗೆ ಒಂದೆಡೆ ಸರಿಯಾದ ತಡೆಗೋಡೆಯಿಲ್ಲ; ಸೂಕ್ತ ಕಾರ್ಯಯೋಜನೆ ರೂಪಿಸಿ ತಡೆಗೋಡೆ ನಿರ್ಮಿಸಬೇಕು ಎಂದು ನಿರ್ಮಿತಿ ಕೇಂದ್ರದ ಅಧಿಕಾರಿಗಳಿಗೆ ಸೂಚಿಸಿದರು. ಇದೇ ವೇಳೆ ಶಾಲೆಯ ಮುಖ್ಯ ಶಿಕ್ಷಕ ಸಕ್ಕೈನ್ ಭಾಷಾ ಅವರು, ಶಾಲೆಗೆ ಸಿಸಿಟಿವಿ ಅಳವಡಿಕೆ ಅಗತ್ಯವಾಗಿದೆ ಎಂದು ಪ್ರಸ್ತಾಪಿಸಿದರು.

ಈ ಸಂದರ್ಭದಲ್ಲಿ ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ನಿರ್ಮಿತಿ ಕೇಂದ್ರದ ಅಧಿಕಾರಿ ವಿರೇಶ್, ಸಹ ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಎಸ್ಐಆರ್ ಜಾಗೃತಿ ಅಂಗವಾಗಿ ಬೈಕ್ ರ್‍ಯಾಲಿ

ಬಳ್ಳಾರಿ:ಎಸ್ಐಆರ್ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬರೂ ಪಾಲ್ಗೊಳ್ಳಿ: ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಕರೆ

ಬಳ್ಳಾರಿ,ಜು.02-

ಮತದಾರರ ಪಟ್ಟಿಯನ್ನು ಅತ್ಯಂತ ಪಾರದರ್ಶಕ ಮತ್ತು ದೋಷರಹಿತವಾಗಿ ಸಿದ್ಧಪಡಿಸಲು ಭಾರತೀಯ ಚುನಾವಣಾ ಆಯೋಗವು ಹಮ್ಮಿಕೊಂಡಿರುವ 'ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ' (ಎಸ್ಐಆರ್) ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಅರ್ಹ ನಾಗರಿಕರು ಪಾಲ್ಗೊಳ್ಳಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ 'ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್)' ಅಂಗವಾಗಿ ಸ್ವೀಪ್ ಚಟುವಟಿಕೆ ಕುರಿತು ಅರಿವು ಮೂಡಿಸಲು ನಗರದ ಹೊಸ ಜಿಲ್ಲಾಡಳಿತ ಭವನದ ಆವರಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಬೈಕ್ ರ್‍ಯಾಲಿಗೆ



ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಈಗಾಗಲೇ ಬೂತ್ ಮಟ್ಟದ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಸಾರ್ವಜನಿಕರಿಗೆ ಗಣತಿ ನಮೂನೆಗಳನ್ನು ವಿತರಿಸುತ್ತಿದ್ದಾರೆ. ಅಧಿಕಾರಿಗಳು ಭೇಟಿ ನೀಡಿದಾಗ ಸರಿಯಾದ ಮಾಹಿತಿ ನೀಡಿ, ನಮೂನೆಗಳನ್ನು ಭರ್ತಿ ಮಾಡಿಕೊಡಬೇಕು ಎಂದು ತಿಳಿಸಿದರು.

ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಮತದಾರರ ಪಟ್ಟಿಯಲ್ಲಿ ಹೆಸರುಗಳ ನಿಖರತೆ ಕಾಪಾಡುವುದು, ಅರ್ಹ ಮತದಾರರ ಹೆಸರು ಸೇರ್ಪಡೆ, ಅನರ್ಹ ಅಥವಾ ಪುನರಾವರ್ತಿತ ಹೆಸರುಗಳ ತಿದ್ದುಪಡಿ ಹಾಗೂ ಅಗತ್ಯ ದಾಖಲಾತಿಗಳನ್ನು ಸಲ್ಲಿಸುವುದು ಎಸ್ಐಆರ್ ಪ್ರಕ್ರಿಯೆಯ ಪ್ರಮುಖ ಉದ್ದೇಶವಾಗಿದೆ ಎಂದು ಹೇಳಿದರು.

ಈ ಮನೆ-ಮನೆ ಪರಿಶೀಲನಾ ಅಭಿಯಾನವು ಜುಲೈ 29 ರವರೆಗೆ ನಡೆಯಲಿದೆ. ಈ ಪ್ರಕ್ರಿಯೆಯ ನಂತರ ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಲಿದ್ದು, ಸೆಪ್ಟೆಂಬರ್ 4 ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶವಿರುತ್ತದೆ. ಅಂತಿಮ ಪಟ್ಟಿಯು ಅಕ್ಟೋಬರ್ 7 ರಂದು ಪ್ರಕಟಗೊಳ್ಳಲಿದೆ ಎಂದು ತಿಳಿಸಿದರು.

ಬೈಕ್ ರ್‍ಯಾಲಿಯು ಹೊಸ ಜಿಲ್ಲಾಡಳಿತ ಭವನದ ಆವರಣದಿಂದ ಆರಂಭಗೊಂಡು ಇಂದಿರಾ ವೃತ್ತ, ಗಡಿಗಿ ಚೆನ್ನಪ್ಪ ವೃತ್ತದ ಮಾರ್ಗವಾಗಿ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಯ ಆವರಣದವರೆಗೆ ನಡೆಯಿತು.

ಈ ವೇಳೆ ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ್, ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ಅಬಕಾರಿ ಉಪ ಆಯುಕ್ತ ಮಂಜುನಾಥ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಸೋಮಸುಂದರ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್. ಬಸರೆಡ್ಡಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿ- ಸಿಬ್ಬಂದಿ ಹಾಗೂ ಜಿಲ್ಲೆಯ ಬೈಕ್ ರೈಡರ್ಸ್ ಭಾಗವಹಿಸಿದ್ದರು.

ತೊಗರಿ ಬೆಳೆಯ ಸುಧಾರಿತ ಬೇಸಾಯ ಕ್ರಮಗಳು: ತಳಕಲ್ ಗ್ರಾಮದಲ್ಲಿ ಒಂದು ದಿನದ ಕಾರ್ಯಾಗಾರ

ಕೊಪ್ಪಳ ಜು.02

ತೊಗರಿ ಬೆಳೆಯಲ್ಲಿ ಸುಧಾರಿತ ಬೇಸಾಯ ಕುರಿತ ಒಂದು ದಿನದ ತಾಂತ್ರಿಕ ಕಾರ್ಯಾಗಾರವು ಇತ್ತೀಚೆಗೆ (ಜೂ. 30ರಂದು) ಕುಕುನೂರು ಹೋಬಳಿಯ ತಳಕಲ್ ಗ್ರಾಮದಲ್ಲಿ ನಡೆಯಿತು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳ ವಿಸ್ತರಣಾ ಮುಂದಾಳು ಆದ ಡಾ. ಬದರಿ ಪ್ರಸಾದ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಈ ಭಾಗದಲ್ಲಿ ತೊಗರಿ ಬೆಳೆ ಇತ್ತೀಚೆಗೆ ಬೆಳೆಯಲಾಗುತ್ತಿದ್ದು, ಹೆಚ್ಚಿನ ತಾಂತ್ರಿಕತೆಗಾಗಿ ಕಲಬುರ್ಗಿಯ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ರಾಜು ತೆಗ್ಗೆಳ್ಳಿ ಮತ್ತು 30 ವರ್ಷಗಳಿಂದಲೂ ತೊಗರಿ ಬೆಳೆತಯನ್ನು ಬೆಳೆಯುತ್ತಾ ಅಪಾರ ಅನುಭವ ಹೊಂದಿದ ಮತ್ತು ಕೃಷಿಯಲ್ಲಿ ಅನೇಕ ಆವಿಷ್ಕಾರಗಳನ್ನು ಮಾಡಿದ ರಾಜ್ಯ ಪ್ರಶಸ್ತಿ ವಿಜೇತ ಕೃಷಿ ಪಂಡಿತ ಹಾಗೂ ರೈತ ವಿಜ್ಞಾನಿ ಶರಣಬಸಪ್ಪ ಪಾಟೀಲ ಅವರನ್ನು ಹೆಚ್ಚಿನ ಮಾಹಿತಿ ನೀಡಲು ಈ ಕಾರ್ಯಾಗಾರಕ್ಕೆ ಆಹ್ವಾನಿಸಲಾಗಿದೆ. ಈ ಭಾಗದ ರೈತರು ತೊಗರಿ ಬೆಳೆಯಲ್ಲಿ ಹೆಚ್ಚಿನ ತಾಂತ್ರಿಕತೆಯನ್ನು ತಿಳಿದುಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವ್ಯವಸ್ಥಾಪನ ಮಂಡಳಿಯ ಸದಸ್ಯರಾದ ತಿಮ್ಮಣ್ಣ ಚವಡಿ ಅವರು ಮಾತನಾಡಿ, ತೊಗರಿ ಬೆಳೆಯ ವಿಸ್ತೀರ್ಣ ಹೆಚ್ಚಾಗುತ್ತಿದ್ದು, ಪ್ರಸ್ತುತ ಮೆಕ್ಕೆಜೋಳ ಬದಲಾಗಿ ತೊಗರಿ ಬೇಸಾಯದತ್ತ ರೈತರು ಒಲವು ತೋರಿಸುತ್ತಿದ್ದಾರೆ ಹಾಗಾಗಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಹಾಗೂ



ವಿಸ್ತರಣಾ ನಿರ್ದೇಶನಾಲಯ ಸಹಕಾರದಿಂದ ಸುಮಾರು 100 ಕ್ವಿಂಟಾಲನಷ್ಟು ತೊಗರಿ ಬೀಜವನ್ನು ವಿತರಿಸಲಾಗಿದೆ. ರೈತರು ಈ ಕಾರ್ಯಾಗಾರದ ಸದುಪಯೋಗವನ್ನು ಮಾಡಿಕೊಳ್ಳ ಬೇಕೆಂದರು.

ಕೊಪ್ಪಳ ಜಿಲ್ಲಾ ಹಾಪ್‌ಕಾಮ್ಸ್ ಸಂಸ್ಥೆಯ ಅಧ್ಯಕ್ಷರಾದ ಯಂಕಣ್ಣಾ ಯರಾಶಿ ಅವರು ಮಾತನಾಡಿ, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವು ಇತ್ತೀಚೆಗೆ ಹೊಸ ಹೊಸ ತಾಂತ್ರಿಕತೆಗಳನ್ನು ರೈತರಿಗೆ ಪರಿಚಯಿಸುತ್ತಾ ಹೊಸ ಹೆಜ್ಜೆ ಇಟ್ಟಿದೆ ಇದೇ ರೀತಿ ರೈತರಿಗೆ ಸಹಕಾರ ಕೊಟ್ಟು ಇನ್ನೂ ಹೆಚ್ಚಿನ ತಾಂತ್ರಿಕ ಮಾಹಿತಿಯನ್ನು ರೈತರಿಗೆ ಒದಗಿಸಲು ಸಹಕರಿಸಬೇಕೆಂದು ತಿಳಿಸಿದರು.

ಕೃಷಿ ತಂತ್ರಜ್ಞರ ಸಂಸ್ಥೆಯ ರಾಜ್ಯ ಪ್ರತಿನಿಧಿ ವೀರಣ್ಣ ಕೆ. ಕಮತರ ಅವರು ಮಾತನಾಡಿ, ಸಂಸ್ಥೆಯು ಎಂದೆಂದಿಗೂ ರೈತರ ಪರವಾಗಿ ಚಟುವಟಿಕೆಗಳನ್ನು ನಡೆಸುತ್ತಿದೆ. ಇನ್ನೂ ಮುಂದೆಯೂ ಸಹ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಸಹಯೋಗದೊಂದಿಗೆ ಹಲವಾರು ತಾಂತ್ರಿಕತೆಗಳ ಪರಿಚಯ ಮಾಡಿಸುವ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದೆಂದು ಹೇಳಿದರು.

ಜಂಟಿ ಕೃಷಿ ನಿರ್ದೇಶಕರಾದ ಜಿ.ಡಿ ಕೃಷ್ಣಮೂರ್ತಿ ಅವರು ಇಲಾಖೆಯ ವಿವಿಧ ಸವಲತ್ತುಗಳ ಕುರಿತು ರೈತರಿಗೆ ಮಾಹಿತಿ ನೀಡಿ, ಬೆಳೆ ವಿಮೆ ಕುರಿತು ರೈತರ ಪ್ರಶ್ನೆಗೆ ಸೂಕ್ತವಾಗಿ ಉತ್ತರಿಸಿದರು.

ಕಾರ್ಯಾಗಾರದ ಅಧ್ಯಕ್ಷತೆಯನ್ನು ವಹಿಸಿದ್ದ ವಿಸ್ತರಣಾ ನಿರ್ದೇಶಕರಾದ ಡಾ. ಎ.ಆರ್. ಕುರುಬರ ಅವರು ಮಾತನಾಡಿ, ಕೊಪ್ಪಳ ಜಿಲ್ಲೆಯಲ್ಲಿ ವಿನೂತನವಾಗಿ ರೈತರೊಂದಿಗೆ ಒಂದು ದಿನ ಕಾರ್ಯಕ್ರಮವನ್ನು ಆರಂಭಿಸಲಾಗಿದ್ದು, ಇನ್ನು ಮುಂದೆಯೂ ತಿಂಗಳಿಗೊಮ್ಮೆಯಾದರೂ ಇಂತಹ ಕಾರ್ಯಕ್ರಮಗಳನ್ನು ರೈತರ ಹೊಲದಲ್ಲಿಯೇ ಆಯೋಜಿಸಲಾಗುವುದು. ಈ ಕಾರ್ಯಾಗಾರವು ತೊಗರಿ ಬೆಳೆಗಾರರಿಗೆ ಪ್ರಸ್ತುತವಾಗಿ ಅತ್ಯಂತ ಪ್ರಮುಖವಾಗಿದ್ದು, ರೈತರು ಹೆಚ್ಚಿನ ತಾಂತ್ರಿಕತೆಗಳನ್ನು ತಿಳಿದುಕೊಳ್ಳಬೇಕೆಂದು ಕರೆ ನೀಡಿದರು.

ರಾಯಚೂರಿನ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರತೀ ಎರಡನೇ ಮತ್ತು ನಾಲ್ಕನೇ ಶನಿವಾರದಂದು ರೈತರ ಸಂತೆ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ರೈತರೇ ಖುದ್ದಾಗಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಬಹುದಾಗಿದೆ. ಇಂತಹ ಕಾರ್ಯಕ್ರಮಗಳನ್ನು ಕೆ.ವಿ.ಕೆ. ಗಂಗಾವತಿ ಮತ್ತು ಕೃ.ವಿ.ಶಿ.ಕೇಂದ್ರ, ಕೊಪ್ಪಳದಲ್ಲಿಯೂ ಮುಂದಿನ ದಿನಮಾನಗಳಲ್ಲಿ ಆಯೋಜಿಸಲಾಗುವುದು ಎಂದು ತಿಳಿಸಿದರು.

ಕಲಬುರ್ಗಿಯ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ರಾಜು ತೆಗ್ಗೆಳ್ಳಿ ಅವರು, ತೊಗರಿ ಬೇಸಾಯದ ಹಲವು ಆಯಾಮಗಳ ಕುರಿತು ರೈತರೊಂದಿಗೆ ತಾಂತ್ರಿಕ ಮಾಹಿತಿಯನ್ನು ನೀಡುವುದರೊಂದಿಗೆ ತೊಗರಿ ಬೆಳೆಯ ಕುರಿತು ಸಮಗ್ರ ಮಾಹಿತಿ ನೀಡಿದರು. ಅಲ್ಲದೇ ರೈತರ ಹಲವಾರು ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ನೀಡಿದರು.

ಕಲಬುರ್ಗಿಯ ರೈತ ವಿಜ್ಞಾನಿಯಾದ ಶರಣಬಸಪ್ಪ ಪಾಟೀಲ ಅವರು ತಮ್ಮ ಹಲವಾರು ನೂತನ ಆವಿಷ್ಕಾರಗಳ ಬಗ್ಗೆ ತಿಳಿಸುತ್ತಾ, ವಿಶೇಷವಾಗಿ ತೊಗರಿ ಬೆಳೆಯಲ್ಲಿ ಕುಡಿ ಚಿವುಟುವ ಯಂತ್ರ ಹಾಗೂ ಇನ್ನಿತರ ಯಂತ್ರಗಳ ಬಗ್ಗೆ ರೈತರಿಗೆ ಮಾಹಿತಿ ನೀಡಿದರು.

ಹೆಚ್ಚಿನ ಮಾಹಿತಿಗಾಗಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳದ ವಿಜ್ಞಾನಿಗಳಾದ ವಿಸ್ತರಣಾ ಮುಂದಾಳು ಡಾ. ಬದರಿ ಪ್ರಸಾದ ಪಿ.ಆರ್. ಮೊ.ನಂ.: 9900145705, ಇವರನ್ನು ಸಂಪರ್ಕಿಸಬಹುದು.



ಬಳ್ಳಾರಿ: ಮುಂದುವರೆದ ಸರ್ಕಾರಿ ಜಾಗ ಒತ್ತುವರಿ ತೆರವು ಕಾರ್ಯಾಚರಣೆ

ಬಳ್ಳಾರಿ,ಜು.02-

ನಗರದ ವಿವಿಧ ವಾರ್ಡ್ ಗಳಲ್ಲಿರುವ ಕೋಟ್ಯಂತರ ರೂಪಾ ಯಿ ಮೌಲ್ಯದ ಸರ್ಕಾರಿ ಜಾಗ ಹಾಗೂ ಅಂಗನವಾಡಿ ಕೇಂದ್ರಗಳಿಗೆ ಕಾಯ್ದಿರಿಸಿದ ಜಾಗಗಳಲ್ಲಿ ಅತಿಕ್ರಮವಾಗಿ ಆಕ್ರಮಿಸಿಕೊಂಡಿರುವುದನ್ನು ಖಚಿತಪಡಿಸಿಕೊಂಡು ಜಿಲ್ಲಾಡಳಿತ ಗುರುವಾರ ಒತ್ತುವರಿ ಕಾರ್ಯಾಚರಣೆ ನಡೆಸಿದೆ.

ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರ ನಿರ್ದೇಶನದಂತೆ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ ಹಾಗೂ ತಹಶೀಲ್ದಾರ್ ಟಿ.ರೇಖಾ ನೇತೃತ್ವದ ಅಧಿಕಾರಿಗಳ ತಂಡವು ನಗರದ ವಿವಿಧೆಡೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಾರ್ವಜನಿಕ ಮತ್ತು ಸರ್ಕಾರಿ ಜಾಗಗಳನ್ನು ರಕ್ಷಿಸಲಾಯಿತು.

ಬೆಳ್ಳಂಬೆಳಗ್ಗೆ ವಿವಿಧ ಯಂತ್ರೋಪಕರಣಗಳ ಮೂಲಕ ಸರ್ಕಾರಕ್ಕೆ ಸೇರಬೇಕಾದ ಜಾಗಗಳನ್ನು ಜಿಲ್ಲಾಡಳಿತದ ವತಿಯಿಂದ ತೆರವುಗೊಳಿ ಸಲಾಯಿತು.

ಬಳ್ಳಾರಿ ನಗರದ ಸಿಟಿಎಸ್ ವಾರ್ಡ್ ನಂ. 21, ಬ್ಲಾಕ್ ನಂ. 03 ರ ಟಿ.ಎಸ್ ನಂ. 41 ರಲ್ಲಿದ್ದ 0.08 ಸೆಂಟ್ಸ್ ಜಾಗವನ್ನು ಅಂಗನವಾಡಿ ಕೇಂದ್ರಕ್ಕೆ ನಿಗದಿಪಡಿಸಲಾಗಿದ್ದು, ಇಲ್ಲಿ ಅತಿಕ್ರಮಣಗೊಂಡ ಜಾಗವನ್ನು ಸುಪರ್ದಿಗೆ ಪಡೆದುಕೊಂಡು ಅತಿಕ್ರಮಣದಾರರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ಬೋರ್ಡ್ ಹಾಕಲಾಗಿದೆ. ವಾರ್ಡ್ ನಂ. 22, ಬ್ಲಾಕ್ ನಂ. 11 ರ ಟಿ.ಎಸ್ ನಂ. 94 ವಿ ಯಲ್ಲಿರುವ ಸುಮಾರು 0.49.6 ಸೆಂಟ್ಸ್ ವಿಸ್ತೀರ್ಣದ ಕರ್ನಾಟಕ ಸರ್ಕಾರದ ಬಯಲು ಜಾಗವನ್ನು ಜಿಲ್ಲಾಡಳಿತ ತೆರವುಗೊಳಿಸಿದೆ.

ಅದೇ ರೀತಿ ವಾರ್ಡ್ ನಂ. 21, ಬ್ಲಾಕ್ ನಂ. 03 ರ ಟಿ.ಎಸ್ ನಂ. 43 ರ ಪೈಕಿ ವಿ ಯಲ್ಲಿರುವ 0.75 ಸೆಂಟ್ಸ್ ಜಾಗವು ಸಂಪೂರ್ಣ ಸರ್ಕಾರಿ ಸ್ವತ್ತಾಗಿದ್ದು, ಅಕ್ರಮ ಪ್ರವೇಶ ಅಥವಾ ಒತ್ತುವರಿ ಮಾಡುವವರ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ ನೀಡಲಾಗಿದೆ. ನಗರದ ಬುಡಾ ಪಾರ್ಕ್, ನಾರಾಯಣಪ್ಪ ಕಾಂಪೌಂಡ್, ಕೋಟೆ ಪ್ರದೇಶ ಹಾಗೂ ಸಿದ್ದಾರ್ಥ ನಗರ, ದೇವಿ ನಗರದ ಸರ್ಕಾರಿ ಜಾಗಗಳಿಗೆ ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿಗಳು ಹಾಗೂ ಪೊಲೀಸ್ ಸಿಬ್ಬಂದಿಗಳೊಂದಿಗೆ ಭೇಟಿ ನೀಡಿ ಒತ್ತುವರಿ ತೆರವು ಹಾಗೂ ರಕ್ಷಣಾ ಕಾರ್ಯ ಕೈಗೊಂಡರು. ಸರ್ಕಾರಿ ಆಸ್ತಿಯನ್ನು ಸಾರ್ವಜನಿಕರ ಹಿತಬಲಿಗಾಗಿ ಕಾಯ್ದಿರಿಸ ಲಾಗಿದ್ದು, ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳು ಇದನ್ನು ಅಕ್ರಮವಾಗಿ ವಶಪಡಿಸಿಕೊಳ್ಳಲು ಯತ್ನಿಸಿದರೆ ಮುಲಾಜಿಲ್ಲದೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಡಳಿತ ತಿಳಿಸಿದೆ. ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಡಿಡಿಎಲ್ಆರ್ ಪ್ರಮೋದ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಜಿ.ಖಲೀಲ್ ಸಾಬ್ ಸೇರಿದಂತೆ ಇತರರಿದ್ದರು.



ವೈದ್ಯರು ರೋಗಿಗಳ ಜೀವ ರಕ್ಷಿಸುವ ಎರಡನೇ ದೇವರು- ಡಾ. ಮಹೇಶ ಬಿರಾದಾರ್

ಯಾದಗಿರಿ, ಜು.02

ಸಮಾಜದಲ್ಲಿ ವೈದ್ಯರ ಪಾತ್ರ ಮತ್ತು ರೋಗಿಗಳ ಜೀವ ರಕ್ಷಿಸುವಲ್ಲಿ ಅವರ ಜವಾಬ್ದಾರಿ ಅತ್ಯಂತ ಮಹತ್ವದ್ದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಮಹೇಶ ಬಿರಾದಾರ್ ಅವರು ತಿಳಿಸಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆ ಕಾರ್ಯಕ್ರಮ ಅಂಗವಾಗಿ ವೈದ್ಯಕೀಯ ಕ್ಷೇತ್ರದ ಡಾ. ಬಿ. ಸಿ. ರಾಯ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿ, ವೈದ್ಯರ ವೃತ್ತಿ ಅತ್ಯಂತ ಪವಿತ್ರವಾದದ್ದು. ರೋಗಿಗಳ ಜೀವ ಉಳಿಸಿ, ಅವರಲ್ಲಿ ಆತ್ಮ ವಿಶ್ವಾಸ ಮೂಡಿಸುವ ಮೂಲಕ ಚಿಕಿತ್ಸೆ ನೀಡುವ ವೈದ್ಯರು ಸಮಾಜದ ಪಾಲಿಗೆ ಎರಡನೇ ದೇವರು ಎಂದು ಬಣ್ಣಿಸಿದರು. ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ಸಾಜಿದ್, ವೈದ್ಯಕೀಯ ವೃತ್ತಿಯು ರೋಗಿಗಳಿಗೆ ಮರುಜೀವ ನೀಡುವುದರ ಜೊತೆಗೆ ಅವರಿಗೆ ಆತ್ಮಸ್ಥೈರ್ಯ ತುಂಬುತ್ತದೆ ಎಂದರು.

ಇದೇ ವೇಳೆ ಜಿಲ್ಲಾ ಕ್ಷಯ ರೋಗ ನಿರ್ಮೂಲಾಧಿಕಾರಿ ಡಾ. ಸಂಜೀವಕುಮಾರ್ ರಾಯಚೂರಕರ್ ಅವರು ಮಾತನಾಡಿ, ಸಾರ್ವಜನಿಕರ ಆರೋಗ್ಯ ರಕ್ಷಣೆಯಲ್ಲಿ ಇಲಾಖೆಯ ವೈದ್ಯರು ಮತ್ತು ಸಿಬ್ಬಂದಿ ಶ್ರಮಿಸುತ್ತಿರುವ ಕಾರ್ಯವನ್ನು ಶ್ಲಾಘಿಸಿದರು. ಅಲ್ಲದೆ, ಡಾ. ಬಿ.ಸಿ. ರಾಯ್ ಅವರ ವೃತ್ತಿ ಜೀವನ ಹಾಗೂ ಆದರ್ಶಗಳನ್ನು ನಾವು ಅಳವಡಿಸಿಕೊಂಡು ಅವರ ಮಾರ್ಗದಲ್ಲಿ ಮುನ್ನಡೆಯಬೇಕು ಎಂದು ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲಾಧಿಕಾರಿ ಡಾ. ಜ್ಯೋತಿ ಕಟ್ಟಿಮನಿ, ತಾಲೂಕು ಆರೋಗ್ಯ ಅಧಿಕಾರಿ ಡಾ. ಹಣಮಂತರೆಡ್ಡಿ, ಡಾ. ಸುನಿತಾ ನಿನ್ನೆಕರ್, ಲಕ್ಷ್ಮಿ ಮುಂಡಾಸ್, ತುಳಸಿ ರಾಮ, ಸಾಹೇಬ ಗೌಡ, ಕಚೇರಿ ಅಧೀಕ್ಷಕರಾದ ಜ್ಯೋತಿ ಹಪ್ಪಳ, ಮಹಿಪಾಲ ರೆಡ್ಡಿ, ಮುನಿಯಪ್ಪ, ಹಣಮಂತ ರಾವ್ ಕುಲಕರಣಿ, ಪ್ರದೀಪ, ಮಲ್ಲಿನಾಥ ಚಂದ್ರಕಾಂತ, ಅನ್ಸಾರಿ, ಹಣಮಂತ, ಫಾರ್ಮಸಿ ಅಧಿಕಾರಿ ಮಲ್ಲಿಕಾರ್ಜುನ, ವಾಹನ ಚಾಲಕ ಅಂಬಾದಾಸ ಸೇರಿದಂತೆ ಆರೋಗ್ಯ ಇಲಾಖೆಯ ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ನಮ್ಮ ನಾಡಿನ ಅಮೂಲ್ಯ ಸಂಪತ್ತಾದ ವಚನ ಸಾಹಿತ್ಯವನ್ನು ಸಂರಕ್ಷಿಸಲು ಜೀವನವನ್ನೇ ಮುಡಿಪಾಗಿಟ್ಟವರು ಹಳಕಟ್ಟಿಯವರು: ಶರಣಬಸಪ್ಪ ಬಿಳಿಎಲಿ

ಕೊಪ್ಪಳ ಜು.02-

ವಚನ ಪಿತಾಮಹರೆಂದೇ ಖ್ಯಾತರಾದ ಫ.ಗು.ಹಳಕಟ್ಟಿಯವರು 12ನೇ ಶತಮಾನದ ಬಸವಾದಿ ಶರಣರ ವಚನಗಳನ್ನು ಸಂರಕ್ಷಿಸಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟು, ವಚನಗಳಿಗೆ ಶಾಶ್ವತ ಅಸ್ತಿತ್ವ ದೊರಕಿ ಸಿಕೊಟ್ಟರು ಎಂದು ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಶರಣ ಬಸಪ್ಪ ಬಿಳಿಎಲಿ ಅವರು ಹೇಳಿದರು.

ಗುರುವಾರದಂದು ಕೊಪ್ಪಳದ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ) ದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಫ.ಗು.ಹಳಕಟ್ಟಿಯವರ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿದ್ದ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

12ನೇ ಶತಮಾನ ಸಾಮಾಜಿಕವಾಗಿ, ಆರ್ಥಿಕವಾಗಿ, ಆಧ್ಯಾತ್ಮಿಕವಾಗಿ, ಮಹಿಳಾ ಸಬಲೀಕರಣ, ಮುಂತಾದ ವಿಷಯಗಳಿಂದಾಗಿ ಕ್ರಾಂತಿಕಾರಿ ಶತಮಾನವಾಗಿತ್ತು. ಆಗ ಬಸವಾದಿ ಶರಣರು ತಾಳೆಗರಿಯ



ಮೇಲೆ ರಚಿಸಿದ ವಚನಗಳು ರಾಜ್ಯಾದ್ಯಂತ ಹಂಚಿ ಹೋದವು. ವಚನ ಸಾಹಿತ್ಯದ ಬಗ್ಗೆ ಅಪಾರ ಗೌರವ ಒಲವು ಇದ್ದ ಮೂಲತಃ ಧಾರವಾಡ ಜಿಲ್ಲೆಯ ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರು ಹೀಗೆ ಹಂಚಿ ಹೋದ ವಚನಗಳನ್ನು ಸಂಗ್ರಹಿಸಲು ಆಸಕ್ತಿ ತೋರಿದರು. ಸತತ 18 ವರ್ಷಗಳ ಕಾಲ ರಾಜ್ಯಾದ್ಯಂತ ಸಂಚರಿಸಿ, ವಚನಗಳ ತಾಳೆಗರಿ ಯನ್ನು ಸಂಗ್ರಹಿಸಿದರು. ನಂತರ ಅವುಗಳನ್ನು ಶಾಶ್ವತವಾಗಿ ಉಳಿಸುವ ಉದ್ದೇಶದಿಂದ ಹಿತಚಿಂತಕ ಎಂಬ ಮೊಟ್ಟ ಮೊದಲ ವಚನ ಸಾಹಿತ್ಯ ಮುದ್ರಣಾಲಯವನ್ನು ಸ್ಥಾಪಿಸಿ ದರು. ವೃತ್ತಿಯಿಂದ ವಕೀಲರಾಗಿದ್ದ ಹಳಕಟ್ಟಿಯವರು ವಚನಗಳನ್ನು ಸಂರಕ್ಷಿಸುವ ಉದ್ದೇಶದಿಂದ ವೃತ್ತಿ ಯಲ್ಲಿನ ಅತ್ಯುತ್ತಮ ಅವಕಾಶ ಗಳನ್ನು ತ್ಯಜಿಸಿ, ತಮ್ಮ ಜೀವನವನ್ನೇ ವಚನಗಳ ಸಂರಕ್ಷಣೆಗಾಗಿ ಮುಡಿ ಪಾಗಿಟ್ಟರು. ವಚನ ಸಾಹಿತ್ಯ ಸಂರಕ್ಷಣೆಯಲ್ಲಿನ ಅವರ ಸಾಧನೆಗೆ ಕನ್ನಡದ ಕಣ್ವ ಬಿ.ಎಂ.ಶ್ರೀ ಅವರು ಹಳಕಟ್ಟಿವರಿಗೆ ವಚನ ಗುಮ್ಮಟ ಎಂದು ಬಿರುದು ನೀಡಿದರು. ಹಳಕಟ್ಟಿವರು ವಚನ ಪಿತಾಮಹ ಎಂದೇ ಖ್ಯಾತರಾದರು ಎಂದು ಅವರು ಹೇಳಿದರು.

ಹಳಕಟ್ಟಿಯವರು ಒಟ್ಟು 2,209 ತಾಳೆಗರಿಯ ವಚನಗಳನ್ನು ಸಂಗ್ರಹಿಸಿದ್ದರು. ಅವುಗಳನ್ನು 250 ವಿವಿಧ ವಿಭಾಗಗಳಾಗಿ ವರ್ಗೀಕರಿಸಿ, 219 ಹೊಸ ವಚನಕಾರರನ್ನು ಗುರುತಿಸಿದರು. ಅಲ್ಲಿಯವರೆಗೂ ಕೇವಲ 50 ವಚನಕಾರರ ಹೆಸರುಗಳಷ್ಟನ್ನೇ ಗುರುತಿಸಲಾಗಿತ್ತು. ಹಳಕಟ್ಟಿಯವರ ವಚನಗಳ ಸಂಗ್ರಹದಿಂದ ಹೊಸ ವಚನಕಾರರು ಗುರುತಿಸಲ್ಪಟ್ಟರು. ವಿವಿಧ ವಿಭಾಗಗಳ ವಚನಗಳ ವರ್ಗೀಕರಣದಲ್ಲಿ 160 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ, 25,000 ಪುಟಗಳ ಸಾಹಿತ್ಯವನ್ನು ಅವರು ಬರೆದಿದ್ದಾರೆ. ಶಿವಾನುಭವ ಎಂಬ ಮಾಸಪತ್ರಿಕೆಯನ್ನು ಆರಂಭಿಸಿದ ಅವರು ಸತತ 36 ವರ್ಷಗಳ ಕಾಲ ಅದನ್ನು ಪ್ರತಿ ಮಾಹೆ ಮುದ್ರಣವಾಗುವಂತೆ ನೋಡಿ ಕೊಂಡರು.

ಕರ್ನಾಟಕ ಏಕೀಕರಣದ ಚಳುವಳಿಗೆ ಬೆಂಬಲ ನೀಡಲು ನವಕರ್ನಾಟಕ ಎಂಬ ವಾರಪತ್ರಿಕೆಯನ್ನು ಆರಂಭಿಸಿದರು. ಕೇವಲ ನಮ್ಮ ನಾಡಿಗೆ ಮಾತ್ರವಲ್ಲದೆ, ಪ್ರಪಂಚಕ್ಕೆ ಕೊಡುಗೆಯಾಗಬಲ್ಲ ವಚನ ಸಾಹಿತ್ಯದ ಸಂರಕ್ಷಣೆಯನ್ನು ತಮ್ಮ ಬದುಕಿನ ಧ್ಯೇಯವಾಗಿ ಸಾಧಿಸಿದವರು ಹಳಕಟ್ಟಿಯವರು ಎಂದು ಅವರು ಹೇಳಿದರು.

ವಿಶ್ವಗುರು ಬಸವೇಶ್ವರ ಸಮಿತಿಯ ರಾಜೇಶ ಶಶಿಮಠ ಅವರು ಮಾತನಾಡಿ, ಫ.ಗು.ಹಳಕಟ್ಟಿಯವರು ಕೇವಲ ವಚನ ಸಾಹಿತ್ಯದ ಪಿತಾಮಹ ಮಾತ್ರವಲ್ಲ ಶಿಕ್ಷಣ ಕ್ಷೇತ್ರಕ್ಕೂ ಅವರ ಕೊಡುಗೆ ಅಪಾರವಾಗಿದೆ. ಅಖಂಡ ಬಿಜಾಪುರ ಜಿಲ್ಲೆಯಲ್ಲಿ ಮರಾಠಿ ಭಾಷೆಯ ಪ್ರಭಾವ ಹೆಚ್ಚಿರುವ ಪ್ರದೇಶದಲ್ಲಿ ಕನ್ನಡ ಭಾಷೆಯ ಉಳಿವಿಗಾಗಿ 6 ಗಂಡು ಮಕ್ಕಳ ಶಾಲೆಗಳನ್ನು ಹಾಗೂ 3 ಹೆಣ್ಣುಮಕ್ಕಳ ಶಾಲೆಯನ್ನು ತೆರೆದರು. ಇಂದಿನ ಬಿ.ಎಲ್.ಡಿ.ಇ ಸಂಸ್ಥೆಯ ಮೂಲ ಸಂಸ್ಥಾಪಕರು ಹಳಕಟ್ಟಿಯವರು. ವಿಶ್ವ ಸಾಹಿತ್ಯಕ್ಕೆ ವಚನ ಸಾಹಿತ್ಯವನ್ನು ಕೊಡುಗೆಯಾಗಿ ನೀಡಿದ್ದಾರೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಉಪ ತಹಶೀಲ್ದಾರರಾದ ಗವಿಸಿದ್ದಪ್ಪ ಮಣ್ಣೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕರ್ಣಕುಮಾರ, ಹಿರಿಯ ಶಿಕ್ಷಕರಾದ ಮಹಮ್ಮದ್ ಅಬ್ದುಲ್ ರಹೀಮ್, ಬಸವ ಸಮಿತಿಯ ಅಧ್ಯಕ್ಷರಾದ ಬಸವರಾಜ ಬಳ್ಳೊಳ್ಳಿ, ವಿಶ್ವಗುರು ಬಸವೇಶ್ವರ ಸಮಿತಿಯ ಹನುಮೇಶ ಕಲಮಂಗಿ ಸೇರಿದಂತೆ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವೆಂಕಟೇಶ ಹಾಗೂ ಸಂಗಡಿಗರು ವಚನ ಗಾಯನ ನಡೆಸಿಕೊಟ್ಟರು. ಶಿಕ್ಷಕ ಹನುಮಂತಪ್ಪ ಕುರಿ ಅವರು ಕಾರ್ಯಕ್ರಮ ನಿರೂಪಿಸಿದರು.

ಒಂದನೇಯ ಪುಟದಿಂದ

ಗ್ರಾಮೀಣ ಭಾಗದ ಅಭಿವೃದ್ಧಿಗೆ ಮೊದಲ ಆದ್ಯತೆ: ಜಿ.ಪಂ ಸಿಇಓ ಈಶ್ವರ ಕುಮಾರ್

ಯೋಜನೆಯ ಶತ ಪ್ರತಿಶತ ಸದು ಪಯೋಗವನ್ನು ಸಾರ್ವಜನಿಕರು ಪಡೆಯಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

(ಬಾಕ್ಸ್)

ದಿನಗೂಲಿ 370 ರೂ. ನಿಂದ 382ಕ್ಕೆ ಏರಿಕೆ ವಿಬಿ-ಜಿ ರಾಮ್-ಜಿ ಯೋಜನೆಯಡಿ ದಿನಗೂಲಿಯನ್ನು 370 ರೂ. ನಿಂದ 382 ರೂ. ಏರಿಕೆ ಮಾಡಿ ಆದೇಶ ಹೊರಡಿಸಿದ್ದು, ಪುರುಷ ಮತ್ತು ಮಹಿಳೆಯರಿಗೆ ಸಮಾನ ಕೂಲಿ ಮುಂದುವರೆಯಲಿದೆ. ಕೂಲಿ ಹಣವನ್ನು ಗರಿಷ್ಠ 15 ದಿನಗಳ ಒಳಗಾಗಿ ಕೂಲಿಕಾರರ ಬ್ಯಾಂಕ್ ಖಾತೆಗಳಿಗೆ ಕಡ್ಡಾಯವಾಗಿ ಜಮೆ ಮಾಡಬೇಕು. ವಿಳಂಬವಾದರೆ ದಂಡದ ರೂಪದಲ್ಲಿ ಪರಿಹಾರ ನೀಡಬೇಕಾಗುತ್ತದೆ.

ನಿಸ್ವಾರ್ಥತೆಯ ಕಾರುಣ್ಯಾಶ್ರಮದ ಸೇವೆಯ ಜೊತೆ ಗುತ್ತೇದಾರ ಕುಟುಂಬ ಸದಾವಕಾಲವಿರುತ್ತದೆ ರಾಜೇಶ

ಇಂತಹ ಸಂಸ್ಥೆಗಳಲ್ಲಿ ಅನ್ನಸಂತರ್ಪಣೆ ಮಾಡಿದರೆ ಆ ಭಗವಂತನ ಪ್ರೀತಿಗೆ ನಾವೆಲ್ಲರೂ ಪಾತ್ರರಾಗಬಹುದು ಎಂದು ಅರ್ಥಪೂರ್ಣವಾಗಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರವೀಣ್ ಕುಮಾರ್. ಹನುಮಂತ. ಸಚಿನ್. ಮೂಕಯ್ಯ. ವಿರೂಪಾಕ್ಷಿ. ಹನುಮಂತಪ್ಪ ನಿವೃತ್ತ ಎ.ಎಸ್.ಐ. ಅಧಿಕಾರಿಗಳು ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸವ ಸ್ವಾಮಿ ಹಿರೇಮಠ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ. ಸಿದ್ದಯ್ಯ ಸ್ವಾಮಿ ಮರಿಯಪ್ಪ ಜ್ಯೋತಿ ಅನೇಕರು ಉಪಸ್ಥಿತರಿದ್ದರು

ಹಂಗಾಮಿನ ಬೆಳೆಗಳಿಗೆ ಬಲದಂಡೆ ಮತ್ತು ಎಡದಂಡೆ ನಾಲೆಯಲ್ಲಿ ನೀರು ಹರಿಸಲು ಸಾಧ್ಯವಾಗುವುದಿಲ್ಲ

ಹಿನ್ನಲೆಯಲ್ಲಿ ಅಚ್ಚುಕಟ್ಟು ಭಾಗದ ಎಲ್ಲಾ ರೈತರು ಇಲಾಖೆಯೊಂದಿಗೆ ಸಹಕರಿಸಬೇಕಾಗಿ ಈ ಮೂಲಕ ಕೋರಲಾಗಿದೆ. ಮುಂಬರುವ ದಿನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಳೆಯಾಗಿ ಜಲಾಶಯ ಭರ್ತಿಯಾದಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ಆಯೋಜಿಸಿ ಬೆಳೆಗಳಿಗೆ ನೀರು ಹರಿಸುವ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದು ತುಂಗಭದ್ರಾ ಯೋಜನಾ ವೃತ್ತ ಕಾರ್ಯದರ್ಶಿಗಳು ಹಾಗೂ ಮುನಿರಾಬಾದ್ ಹಾಗೂ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೋಸರಾಜು ಅವರಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ಸ್ಥಳೀಯ ಲಾರಿ ಮಾಲೀಕರು ಹಾಗೂ ಸಾರಿಗೆ ಕ್ಷೇತ್ರಕ್ಕೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಹೇಳಿದರು.

ಸಚಿವ ಸಂಪುಟದಲ್ಲಿ ಎನ್.ಎಸ್. ಬೋಸರಾಜು ಅವರಿಗೆ ಸ್ಥಾನ ನೀಡಿ, ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಿದರೆ ಟ್ರಕ್ ಟರ್ಮಿನಲ್ ಸೇರಿದಂತೆ ಜಿಲ್ಲೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ಸಿಗಲಿದೆ. ಜೊತೆಗೆ ಹಿಂದುಳಿದ ಜಿಲ್ಲೆಯಾದ ರಾಯಚೂರಿಗೆ ಇನ್ನೂ ಹೆಚ್ಚಿನ ಸಚಿವ ಸ್ಥಾನಗಳು ದೊರೆತರೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಣ್ಣ ಪ್ರಮಾಣದ ಟ್ರಕ್ ಟರ್ಮಿನಲ್‌ಗಳನ್ನು ಸ್ಥಾಪಿಸಲು ಸಾಧ್ಯವಾಗುತ್ತದೆ. ಇದರಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೂ ಆರ್ಥಿಕ ಲಾಭವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಸುದ್ದಿಗೋಷ್ಠಿಯಲ್ಲಿ ಸೈಯದ್ ಹಸನ್, ತೌಫೀಕ್ ಹುಸೇನ್ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಧರ್ಮ ಪತ್ನಿ ಪಾರ್ವತಮ್ಮ ಹೆಸರಲ್ಲಿ ಭವ್ಯ ಕಲ್ಲಿನ ಶೀಲಾ ಮಂಟಪ ನಿರ್ಮಾಣ-ಪಾಪಾರೆಡ್ಡಿ

ನಿರ್ಮಿಸಲಾಗುತ್ತಿದೆ.ಇತ್ತೀಚಿಗೆ ನನ್ನ ಧರ್ಮ ಪತ್ನಿ ಅಗಲಿಕೆ ನನಗೆ ತೀವ್ರ ನೋವು ಉಂಟಾಗಿದ್ದು, ನನ್ನ ಜನಪ್ರಿಯತೆ ಹಿಂದೆ ಅವರ ಕೊಡುಗೆ ಬಹುದೊಡ್ಡದು, ಅವರ ಅಗಲಿಕೆ ಹಿಂದೆ ಮುಂಗಾರು ಸಾಂಸ್ಕೃತಿಕ ರಾಯಚೂರು ನಾಡ ಹಬ್ಬವನ್ನು ಈ ಭಾರಿ ತಾತ್ಕಾಲಿಕ ಮುಂದೂಡಲಾಗಿದ್ದು,ಕಲ್ಯಾಣ ಕರ್ನಾಟಕ ಭಾಗದಲ್ಲಿ ಅತ್ಯಂತ ವೈಭವಕರಣದಿಂದ ರೈತನ ಜೋಡುತ್ತು, ಬಸವಣ್ಣ ಹಾಗೂ ಶ್ರೀಕೃಷ್ಣದೇವರಾಯ ಅವರ ಶೀಲಾ ಮಂಟಪವನ್ನು ಕಲ್ಲಿನಿಂದ ನಿರ್ಮಾಣ ಮಾಡಲಾಗುತ್ತಿದೆ ಎಂದರು.ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷರು ಬೆಲ್ಲಂ ನರಸರೆಡ್ಡಿ,ಯು.ಕೃಷ್ಣಮೂರ್ತಿ, ಬಂಗಿ ನರಸರೆಡ್ಡಿ, ಕುಕ್ಕಲ ನರಸಿಂಹಲು, ಗುಡ್ಸಿ ಪ್ರತಾಪ್ ರೆಡ್ಡಿ,

ಯು.ಗೋವಿಂದರೆಡ್ಡಿ, ಪಿ.ಶ್ರೀನಿವಾಸ್ ರೆಡ್ಡಿ,ಎನ್. ಶ್ರೀನಿವಾಸ್ ರೆಡ್ಡಿ,ಎಸ್ ಜನಾರ್ದನ ರೆಡ್ಡಿ,ಪುಂಡ್ಲ ರಾಜೇಂದ್ರರೆಡ್ಡಿ ಪ್ಯಾಲಂ ಮಲ್ಲೇಶ, ಗಂಗಣ್ಣಗಾರು ಭೀಮರೆಡ್ಡಿ, ಜಿ.ವಿರೇಶರೆಡ್ಡಿ, ನಿಂಬೆಕಾಯಿ ಭೀಮರೆಡ್ಡಿ, ಬಂಗಿ ಮುನಿರೆಡ್ಡಿ, ಜಿ.ವೀರೇಶರೆಡ್ಡಿ, ಯು.ನರಸರೆಡ್ಡಿ, ಗುಂಜಪಲ್ಲಿ ರವಿ, ಪಾಪಣ್ಣಗಾರು ರವಿ, ಮುನ್ನೂರು ಕಾಪು ಸಮಾಜದ ಸೇರಿದಂತೆ ಉಪಸ್ಥಿತರಿದ್ದರು.

ಕಂಪ್ಲಿಯ ಜೆ.ಎನ್.ಗಣೇಶ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ



ಹೊಸಪೇಟೆ ,ಜು.02-

ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಕಂಪ್ಲಿಯ ಜೆ.ಎನ್.ಗಣೇಶ್ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಲೇಬೇಕು, ಈ ನಿಟ್ಟಿನಲ್ಲಿ ಸರ್ಕಾರದ ಕಣ್ಣು ತೆರೆಸುವ ಸಲುವಾಗಿ ಜುಲೈ 6ರಂದು ನಗರದಲ್ಲಿ ಪಾದಯಾತ್ರೆ ನಡೆಸಲಾಗುವುದು ಎಂದು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಗೋಸಲ ಭರಮಪ್ಪ ಹೇಳಿದರು.

ಇಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಸದ್ಯ ಸಮುದಾಯದ ಸತೀಶ್ ಜಾರಕಿಹೊಳಿ ಅವರಿಗೆ ಮಾತ್ರ ಸಚಿವ ಸ್ಥಾನ ನೀಡಲಾಗಿದೆ. ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಕನಿಷ್ಠ ನಾಲ್ವರಿಗೆ ಸಚಿವ ಸ್ಥಾನ ನೀಡಬೇಕು. ಗಣೇಶ್ ಅವರಲ್ಲದೆ, ಇನ್ನೂ ಇಬ್ಬರಿಗೆ ಸಚಿವ ಸ್ಥಾನ ನೀಡಬೇಕು ಎಂದರು.

ಗಣೇಶ್ ಅವರು ಮೂಲತಃ ಹೊಸಪೇಟೆಯರು, ಕಂಪ್ಲಿಯಲ್ಲಿ ಅವರು ಬಹಳಷ್ಟು ಉತ್ತಮ ಕೆಲಸ ಮಾಡಿದ್ದಾರೆ. ಬಳ್ಳಾರಿ-ವಿಜಯನಗರ ಜಿಲ್ಲೆಗಳು ಒಳಗೊಂಡಂತೆ ಗಣೇಶ್ ಬದಲಿಗೆ ನಾಗೇಂದ್ರ ಇರಬಹುದು, ಸಮುದಾಯದ ಇತರ ಯಾರೇ ಶಾಸಕರಿಗೆ ಮಂತ್ರಿ ಸ್ಥಾನ ನೀಡಿದರೂ ನಮ್ಮ ಅಭ್ಯಂತರ ಇಲ್ಲ. ಆದರೆ ಸಚಿವ ಸ್ಥಾನ ನೀಡದೆ ಇದ್ದರೆ ಹೋರಾಟ ತೀವ್ರಗೊಳ್ಳಲಿದೆ. ಜುಲೈ 6ರಂದು ಸಣ್ಣಕ್ಕಿ ವೀರಭದ್ರ ದೇವಸ್ಥಾನದಿಂದ ವಡಕರಾಯ ದೇವಸ್ಥಾನದ ತನಕ ಪಾದಯಾತ್ರೆ ನಡೆಸಿ ಬಳಿಕ ಜಂಬುನಾಥ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಲಾಗುವುದು ಎಂದು ಭರಮಪ್ಪ ತಿಳಿಸಿದರು. ಸಮಾಜದ ಮುಖಂಡ ರಾಮಣ್ಣ ಮಾತನಾಡಿ, ಗಣೇಶ್ ಅವರನ್ನು ಸಚಿವರನ್ನಾಗಿ ಮಾಡದಿದ್ದರೆ ಹೋರಾಟ ತೀವ್ರಗೊಳ್ಳಲಿದೆ ಎಂದು ಎಚ್ಚರಿಸಿದರು. ಸಮಾಜದ ಮುಖಂಡರಾದ ಜೆ.ವಸಂತ, ಕಿನ್ನಾಳ್ ಹನುಮಂತ, ಪೂಜಾರ್ ದುರುಗಪ್ಪ ಇತರರು ಮಾತನಾಡಿದರು. ಗುಜ್ಜಲ್ ಲಿಂಗಪ್ಪ, ಎಸ್.ಎಸ್. ಚಂದ್ರಶೇಖರ್, ಬಂಡೆ ರಂಗಪ್ಪ, ದುರುಗಪ್ಪ ಪೂಜಾರಿ, ಸಣ್ಣಕ್ಕಿ ಚಂದ್ರಶೇಖರ್, ಸಣ್ಣಕ್ಕಿ ವಸಂತ, ಕಂಪ್ಲಿ ಕಣಿವೆಪ್ಪ ಇತರರು ಇದ್ದರು.

ಬಳ್ಳಾರಿಯ ಮೌಲಾನಾ ಆಜಾದ್ ಮಾದರಿ ಶಾಲೆಗೆ ತಟ್ಟೆ ಲೋಟ ದೇಣಿಗೆ ನೀಡಿದ ಲಂಡನ್ ಸಾಫ್ಟ್‌ವೇರ್ ಇಂಜಿನಿಯರ್



ಬಳ್ಳಾರಿ,ಜು.02

ಇಲ್ಲಿನ ಬೆಳಗಲ್ ರಸ್ತೆಯ ಆಕಾಶವಾಣಿ ಕೇಂದ್ರದ ಹತ್ತಿರವಿರುವ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಮೌಲಾನಾ ಆಜಾದ್ ಮಾದರಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟದ ತಟ್ಟೆ ಹಾಗೂ ಲೋಟಗಳನ್ನು ದೇಣಿಗೆಯಾಗಿ ನೀಡಲಾಗಿದೆ.

ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಮತ್ತು ಕ್ಷೀರಭಾಗ್ಯ ಯೋಜನೆಯಡಿ ಹಾಲು ಸೇವಿಸಲು ತಟ್ಟೆ ಹಾಗೂ ಲೋಟಗಳ ಕೊರತೆ ಇರುವುದನ್ನು ಮನಗಂಡು ಬಳ್ಳಾರಿಯ ತಾಳೂರು ರಸ್ತೆ ನಿವಾಸಿಯಾಗಿದ್ದು, ಪ್ರಸ್ತುತ ಲಂಡನ್‌ನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿರುವ ಶೇಕ್ಷಾವಲಿ ಅವರು ತಮ್ಮ ಸ್ವಂತ ಖರ್ಚಿನಲ್ಲಿ 130 ಊಟದ ತಟ್ಟೆಗಳು ಮತ್ತು 130 ಹಾಲಿನ ಲೋಟಗಳನ್ನು ಶಾಲೆಗೆ ಉಚಿತವಾಗಿ ಕೊಡುಗೆಯಾಗಿ ನೀಡಿದ್ದಾರೆ.

ಮಕ್ಕಳ ಶೈಕ್ಷಣಿಕ ಮತ್ತು ಮೂಲಸೌಕರ್ಯದ ಅಗತ್ಯಕ್ಕೆ ಸ್ಪಂದಿಸಿದ ದಾನಿ ಶೇಕ್ಷಾವಲಿ ಅವರಿಗೆ ಮೌಲಾನಾ ಆಜಾದ್ ಮಾದರಿ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹೃತ್ಪೂರ್ವಕ ಕೃತಜ್ಞತೆ ಹಾಗೂ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಸಮಗ್ರ ಸಾವಯುವ ಕೃಷಿಗೆ ಸೂಕ್ತ ಯೋಜನೆಗಳನ್ನು ಜಾರಿಗೊಳಿಸಿ: ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ



ಕೊಪ್ಪಳ ಜು.02-

ಜಿಲ್ಲೆಯಲ್ಲಿ ಸಮಗ್ರ ಸಾವಯವ ಕೃಷಿ ವ್ಯವಸ್ಥೆಗಾಗಿ ಸೂಕ್ತ ಯೋಜನೆಗಳನ್ನು ರೂಪಿಸಿ, ಅವುಗಳ ಜಾರಿಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಕೃಷಿ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸಲಹೆ ನೀಡಿದರು.

ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಬುಧವಾರ (ಜುಲೈ 01) ಕೃಷಿ ಹಾಗೂ ಕೃಷಿ ಸಂಬಂಧಿತ ಇಲಾಖೆಗಳ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ನೀರಾವರಿ ಪ್ರದೇಶ ದಲ್ಲಿ ಹಾಗೂ ವಿಶೇಷವಾಗಿ ಭತ್ತ ಬೆಳೆಯುವ ಭಾಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಸಾಯನಿಕಗೊಬ್ಬರಗಳ ಬಳಕೆಯಾಗುತ್ತಿದ್ದು, ಇದು ಜನರ ಆರೋಗ್ಯಕ್ಕೆ ಹಾನಿಕಾರವಾ ಗುವ ಜೊತೆಗೆ ಭೂಮಿಯ ಫಲವತ್ತತೆಯನ್ನು ಸಹ ಹಾಳು ಮಾಡುತ್ತದೆ. ಇದಕ್ಕಾಗಿ ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಈ ಬಗ್ಗೆ ಜಿಲ್ಲೆಯ ರೈತರಿಗೆ ನಿರಂತರ ಅರಿವು ಮೂಡಿಸಬೇಕು. ಜಿಲ್ಲೆಯಲ್ಲಿ ರೇಷ್ಮೆ, ತೋಟಗಾರಿಕೆ, ಪಶುಪಾಲನೆ ಪ್ರಮಾಣವನ್ನು ಹೆಚ್ಚಿಸುವುದರ ಜೊತೆಗೆ ಸಮಗ್ರ ಸಾವಯವ ಕೃಷಿಗೆ ಉತ್ತೇಜನ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಕೃಷಿ ಹೊಂಡ, ಚೆಕ್ ಡ್ಯಾಂಗಳ ನಿರ್ಮಾಣದಂತಹ ಯೋಜನೆಗಳ ಜಾರಿಗೂ ಒತ್ತು ನೀಡಬೇಕೆಂದರು.

ಕೃಷಿ, ತೋಟಗಾರಿಕಾ ಬೆಳೆಗಳಿಗೆ ಪ್ರಧಾನ ಪೋಷಕಾಂಶಗಳು ಮತ್ತು ಲಘು ಪೋಷಕಾಂಶಗಳಿಗೆ ಭೂಮಿಯೇ ಮುಖ್ಯ ಆಧಾರವಾಗಿದೆ. ಆದರೆ, ಮಣ್ಣಿನಿಂದ ಎಲ್ಲಾ ಪೋಷಕಾಂಶಗಳು ಬೆಳೆಗಳಿಗೆ ಬೇಕಾದ ಪ್ರಮಾಣದಲ್ಲಿ ದೊರೆಯದಿರುವ ಕಾರಣ ಬಾಹ್ಯವಾಗಿ ಗೊಬ್ಬರ ನೀಡಲಾಗುತ್ತದೆ. ರೈತರು ಕೇವಲ ಒಂದು ಅಥವಾ ಎರಡು ಪೋಷಕಾಂಶ ಒದಗಿಸುವ ಯೂರಿಯಾ ಹಾಗೂ ಡಿ.ಎ.ಪಿ.ಯ ಬಳಕೆಯನ್ನು ಹೆಚ್ಚಾಗಿ ಮಾಡುತ್ತಾರೆ. ಇದನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕು. ಭೂಮಿ ಮತ್ತು ಬೆಳೆಗಳಿಗೆ ಅಗತ್ಯವಿರುವ ಪೋಷಕಾಂಶಗಳನ್ನು ಸಾವಯವ ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಹಿಂಡಿ ಗೊಬ್ಬರ, ಎರೆಹುಳಗೊಬ್ಬರ, ಜೈವಿಕ ಗೊಬ್ಬರಗಳ ಬಳಕೆ ಹೆಚ್ಚಿಸಲು ರೈತರಿಗೆ ಸೂಕ್ತ ಮಾರ್ಗದರ್ಶನ ಮಾಡಬೇಕು ಎಂದು ಹೇಳಿದರು.

2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯನ್ನು ಕೊಪ್ಪಳ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ರೈತರು ತಮ್ಮ ಬೆಳೆಗಳಿಗೆ ವಿಮಾ ರಕ್ಷಣೆ ಪಡೆಯಲು ನಿಗದಿತ ದಿನಾಂಕದೊಳಗೆ ನೋಂದಾಯಿಸಿಕೊಳ್ಳಬೇಕಿದೆ. ಇದಲ್ಲದೇ ರೈತರು ತಾವು ಬೆಳೆದ ಬೆಳೆಯನ್ನೇ ಸ್ವಯಂ ಬೆಳೆ ಸಮೀಕ್ಷೆ ಮೂಲಕ ದೃಢೀಕರಿಸಲು ಮತ್ತು ಸರಿಯಾದ ಬೆಳೆಯನ್ನು ನೋಂದಾಯಿಸಲು ಅವಕಾಶವಿದ್ದು, ಈ ಬಗ್ಗೆ ರೈತರಿಗೆ ಅರಿವು ಮೂಡಿಸಬೇಕು ಎಂದು ಸಂಬಂಧಪಟ್ಟ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪೋಸ್ಟರ್ ಬಿಡುಗಡೆ: ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕೃಷಿ ಇಲಾಖೆಯಿಂದ ಸಿದ್ದಪಡಿಸಲಾದ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನೆಯ ಕುರಿತು ಜಾಗೃತಿ ಮೂಡಿಸುವ ಪೋಸ್ಟರಗಳನ್ನು ಇದೇ ವೇಳೆ ಬಿಡುಗಡೆ ಮಾಡಲಾಯಿತು.

ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ನಿರ್ಮಲಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಹೇಮಂತ ಕುಮಾರ್, ಜಂಟಿ ಕೃಷಿ ನಿರ್ದೇಶಕರಾದ ಜಿ.ಡಿ. ಕೃಷ್ಣಮೂರ್ತಿ, ತೋಟಗಾರಿಕೆ ಜಂಟಿ ನಿರ್ದೇಶಕರಾದ ಕೃಷ್ಣ ಸಿ. ಉಕ್ಕುಂದ, ಉಪ ಕೃಷಿ ನಿರ್ದೇಶಕರಾದ ಎಲ್. ಸಿದ್ದೇಶ್ವರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜಿಲ್ಲೆಯ ಎಲ್ಲಾ ತಾಲ್ಲೂಕಿನ ಸಹಾಯಕ ಕೃಷಿ ಅಧಿಕಾರಿಗಳು, ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಚನ ಸಾಹಿತ್ಯದ ಪುನರುಜ್ಜೀವಕ ಡಾ. ಫ.ಗು.ಹಳಕಟ್ಟಿ: ಸಿದ್ಧರಾಮ ಕಲ್ಮಠ ಅಭಿಮತ



ಬಳ್ಳಾರಿ,ಜು.03

ಹನ್ನೆರಡನೇ ಶತಮಾನದ ಕಲ್ಯಾಣ ಕ್ರಾಂತಿಯ ನಂತರ ಚಲ್ಲಾಪಿಲ್ಲಿಯಾಗಿ ಕಣ್ಮರೆಯಾಗುತ್ತಿದ್ದ ವಚನ ಸಾಹಿತ್ಯವನ್ನು ಮರುಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸುವ ಮೂಲಕ ಕನ್ನಡ ಜನತೆಗೆ ವಚನಗಳ ಬೆಳಕನ್ನು ನೀಡಿದ 'ವಚನ ಪಿತಾಮಹ' ಡಾ. ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರ ಕೊಡುಗೆ ಅಪಾರ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿದ್ಧರಾಮ ಕಲ್ಮಠ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ಹೊಂಗಿರಣ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಡಾ.ಫ.ಗು. ಹಳಕಟ್ಟಿಯವರ ಜನ್ಮದಿನ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿ ಅವರು ಮಾತನಾಡಿದರು.

12 ನೇ ಶತಮಾನದಲ್ಲಿ ಬಸವಾದಿ ಶರಣರು ಅನುಭವ ಮಂಟಪದಲ್ಲಿ ಅಪಾರ ಪ್ರಮಾಣದ ವಚನ ಸಾಹಿತ್ಯವನ್ನು ಸೃಷ್ಟಿಸಿದ್ದರು. ಆದರೆ ಕಲ್ಯಾಣ ಕ್ರಾಂತಿಯ ನಂತರ, ಶರಣರನ್ನು ಹಿಮ್ಮೆಟ್ಟಿಸುವ ಹಾಗೂ ವಚನಗಳನ್ನು ನಾಶಮಾಡುವ ಸಂಚು ನಡೆದಾಗ ವಚನಗಳನ್ನು ರಕ್ಷಿಸುವ ಕಾರ್ಯವನ್ನು ಫ. ಗು. ಹಳಕಟ್ಟಿಯವರು ಕೈಗೆತ್ತಿಕೊಂಡಿದ್ದವರು ಎಂದು ತಿಳಿಸಿದರು.

19 ನೇ ಶತಮಾನದ ಆರಂಭದಲ್ಲಿ ಕೇವಲ 25 ವಚನಕಾರರ ಬೆರಳೆಣಿಕೆಯಷ್ಟು ವಚನಗಳು ಮಾತ್ರ ಬೆಳಕಿನಲ್ಲಿದ್ದವು. ಅಂತಹ ಸಂದರ್ಭದಲ್ಲಿ ಹಳಕಟ್ಟಿಯವರು ಸುಮಾರು 22,000 ವಚನಗಳನ್ನು ದೇಶದ ಮೂಲೆ ಮೂಲೆಗಳಿಂದ ಸಂಗ್ರಹಿಸಿದರು ಎಂದರು.

1880 ರಲ್ಲಿ ಧಾರವಾಡದಲ್ಲಿ ಜನಿಸಿದ ಹಳಕಟ್ಟಿಯವರ ಮೂಲ ಊರು ಬೆಳಗಾವಿ ಜಿಲ್ಲೆಯ ಪರಸಗಡ ಹತ್ತಿರದ ಹಳಕಟ್ಟಿ. ಇವರ ತಂದೆ ಗುರುಬಸಪ್ಪನವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದು ಉತ್ತಮ ಲೇಖಕರಾಗಿದ್ದರು. ಇವರ ಸಂಸ್ಕಾರ ಹಳಕಟ್ಟಿಯವರಿಗೆ ಬಾಲ್ಯದಲ್ಲೇ ದೊರೆತಿತ್ತು. ಮೂರನೇ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಇವರನ್ನು ಅಜ್ಜಿ ಬಸ್ಸಮ್ಮ ಸಾಕಿ ಬೆಳೆಸಿದರು ಎಂದರು.

ಧಾರವಾಡದಲ್ಲಿ ಪ್ಲೇಗ್ ರೋಗ ಹರಡಿದಾಗ ಹೆಂಡತಿಯ ಊರಾದ ಬನಹಟ್ಟಿಗೆ ತೆರಳಿದ್ದ ಸಂದರ್ಭದಲ್ಲಿ ಮಾವನವರು ನೀಡಿದ 'ಷಟಸ್ಥಲ' ಮತ್ತು 'ಪ್ರಭುದೇವರ ವಚನಗಳು' ಎಂಬ ತಾಡೋಲೆ ಪುಸ್ತಕಗಳು ಹಳಕಟ್ಟಿಯವರ ಜೀವನದ ದಿಕ್ಕನ್ನೇ ಬದಲಿಸಿದವು. ವಚನಗಳ ಮಹತ್ವವನ್ನು ಅರಿತ ಅವರು, ತಮ್ಮ ಇಡೀ ಜೀವನವನ್ನು ವಚನ ಸಾಹಿತ್ಯಕ್ಕಾಗಿ ಮುಡಿಪಾಗಿಡಲು ಸಂಕಲ್ಪಿಸಿದವರು ಎಂದು ತಿಳಿಸಿದರು.

ಬಡತನ, ಅನಾರೋಗ್ಯ ಕಾಡುತ್ತಿದ್ದರೂ ಲೆಕ್ಕಿಸದೆ ವಚನಗಳ ಹುಡುಕಾಟಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡರು. ಶಿಕ್ಷಣ ಕ್ಷೇತ್ರ ಮತ್ತು ಸಾರ್ವಜನಿಕ ಸೇವೆಯಲ್ಲೂ ಅಪಾರವಾಗಿ ಶ್ರಮಿಸಿದ ಇವರ ವ್ಯಕ್ತಿತ್ವವು, ಶರಣರು ಹೇಳಿದಂತೆ ಎಲ್ಲೇ ಇದ್ದರೂ ಪರಿಮಳ ಬೀರುವ ಗಂಧದ ಮರದಂತೆ ಇತ್ತು. ಅಂದು ಹಳಕಟ್ಟಿಯವರು ಶ್ರಮಿಸದೇ ಹೋಗಿದ್ದರೆ ಇಂದು ನಮಗೆ ಸುಮಾರು 250 ಕ್ಕೂ ಹೆಚ್ಚು ವಚನಕಾರರ ಅಮೂಲ್ಯ ವಚನಗಳು ಲಭ್ಯವಾಗುತ್ತಿರಲಿಲ್ಲ. ಕತ್ತಲೆಯಲ್ಲಿದ್ದ ವಚನಗಳ ಬೆಳಕನ್ನು ನಾಡಿಗೆ ತಂದ ಈ ಮಹಾನ್ ಚೇತನಕ್ಕೆ ಕನ್ನಡಿಗರು ಸದಾ ಕೃತಜ್ಞರಾಗಿರಬೇಕಾಗಿದೆ ಎಂದರು.

ಸತ್ಯಂ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕ ಆಲಂಭಾಷಾ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಚನ ಎನ್ನುವ ಮೂರಕ್ಷರದ ಪದದ ಹಿನ್ನೆಲೆಯನ್ನು ವಿವರಿಸಿದ ಅವರು, ವಚನ ಎಂದರೆ ಕೇವಲ ಸಾಲುಗಳಲ್ಲ; 'ವ' ಎಂದರೆ ವಚಿಸುವುದು ಅಂದರೆ ಕೇಳಲು ಇಷ್ಟವಾಗುವುದು, 'ಚ' ಎಂದರೆ ಚಲಿಸುವುದು ಅಂದರೆ 12ನೇ ಶತಮಾನದಿಂದ ಹಿಡಿದು 21ನೇ ಶತಮಾನದವರೆಗೂ ನಿರಂತರವಾಗಿ ಸಾಗಿಬಂದಿರುವುದು, ಮತ್ತು 'ನ' ಎಂದರೆ ನಯನಿಸುವುದು ಅಂದರೆ ಕಣ್ಣಿಗೆ ಸುಂದರವಾಗಿ ಕಾಣುವುದು ಎಂದು ಅರ್ಥೈಸಿದರು.

ನಿಗದಿತ ಅವಧಿಯಲ್ಲಿ ಉತ್ತಮ ಗುಣಮಟ್ಟದ ಕಾಮಗಾರಿ ಕೈಗೊಳ್ಳಿ. ಬಾಬುಗೌಡ ಬಾದರ್ಲಿ



ಸಿಂಧನೂರು. ಜುಲೈ.2. ಸಿಂಧನೂರು ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬಸಾಪುರ. ಈ.ಜೆ.ಗ್ರಾಮದಲ್ಲಿ ಸಿಂಧನೂರು ಕ್ಷೇತ್ರದ ಸ್ಥಳೀಯ ಶಾಸಕರ ಪ್ರದೇಶ ಅಭಿವೃದ್ಧಿ ಅನುದಾನದಲ್ಲಿ. ಮಂಜೂರಾದ.ಸಿ.ಸಿ. ರಸ್ತೆ ಕಾಮಗಾರಿಗಳಿಗೆ. ಶಾಸಕರ ಅನುಪಸ್ಥಿತಿಯಲ್ಲಿ. ಸಿಂಧನೂರು ನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ. (ಸೂಡಾ) ಬಾಬು ಗೌಡ ಬಾದರ್ಲಿ ಅವರು. ಸಿ.ಸಿ ರಸ್ತೆಯ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು. ಶಾಸಕ ಹಂಪನಗೌಡ ಬಾದರ್ಲಿ ಅವರು. ತಮ್ಮ ಕ್ಷೇತ್ರದ ಸಮರ್ಪಕ ಅಭಿವೃದ್ಧಿಗಾಗಿ ಕಂಕಣ ಬದ್ಧರಾಗಿ ಕಾರ್ಯ ನಿರ್ವಹಿಸುತ್ತಿದ್ದು. ಎಲ್ಲಾ ಜಾತಿ ಜನಾಂಗದವರ ಪರವಾಗಿ ಶಾಸಕರಿದ್ದು. ಪ್ರತಿಯೊಂದು ಗ್ರಾಮಗಳ ಮೂಲ ಸೌಕರ್ಯ ಅಭಿವೃದ್ಧಿಗೆ. ಶಾಸಕರು ಶ್ರಮಿಸುತ್ತಿದ್ದು. ಇದರ ಅಂಗವಾಗಿ ಇಂದು ಬಸಾಪುರ್ ಇ ಜೆ ಗ್ರಾಮದ. ಸಿ.ಸಿ ರಸ್ತೆ ಕಾಮಗಾರಿಯನ್ನು ಕೈಗೊಂಡಿದ್ದು. ಈ ಕಾಮಗಾರಿಗು ಗ್ರಾಮದ ಮೂಲ ಸೌಕರ್ಯ ಅಭಿವೃದ್ಧಿಗೆ ಮಹತ್ವದ ಕೊಡುಗೆಯಾಗಲಿದ್ದು. ಸಾರ್ವಜನಿಕರಿಗೆ ಸುಗಮ ಸಂಚಾರದ ವ್ಯವಸ್ಥೆಯನ್ನು ಕಲ್ಪಿಸುವ ಮತ್ತೊಂದು ಹೆಜ್ಜೆಯಾಗಿದೆ ಎಂದರು. ಗ್ರಾಮಸ್ಥರು ಈ ಕಾಮಗಾರಿಯ ಮೇಲೆ ನಿಗಾ ವಹಿಸಿ ಗುಣಮಟ್ಟದ ಕಾಮಗಾರಿಯನ್ನು ಮಾಡಿಸಿಕೊಳ್ಳಬೇಕೆಂದು ಹೇಳಿದರು. ಕಾಮಗಾರಿ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಈ ಕಾಮಗಾರಿಯನ್ನು ಉತ್ತಮ ಗುಣಮಟ್ಟದಿಂದ ಹಾಗೂ ನಿಯಮಿತ ಅವಧಿಯಲ್ಲಿ ಶೀಘ್ರವಾಗಿ ಪೂರ್ಣಗೊಳಿಸುವಂತೆ ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ. ಗ್ರಾಮಸ್ಥರು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ವಚನ ಸಾಹಿತ್ಯ ಉಳಿಸಿ ಬೆಳೆಸಿದ ಮಹನೀಯ ಡಾ. ಫ.ಗು. ಹಳಕಟ್ಟಿ



ಬಾಗಲಕೋಟೆ , ಜು.03-

ಬಿ.ವಿ.ವಿ.ಎಸ್. ಅಕ್ಕನ ಬಳಗ ಹಾಗೂ ಕದಳಿ ಮಹಿಳಾ ವೇದಿಕೆ, ತಾಲೂಕು ಘಟಕ ಬಾಗಲಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ ಗುರುವಾರ ಬಸವೇಶ್ವರ ಹೆಣ್ಣುಮಕ್ಕಳ ಮಾಧ್ಯಮಿಕ ಶಾಲೆಯಲ್ಲಿ ವಚನ ಗುಮ್ಮಟ ಡಾ. ಫ.ಗು. ಹಳಕಟ್ಟಿ ಅವರ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಅಕ್ಕನ ಬಳಗದ ಹಿರಿಯ ಸದಸ್ಯೆ ಕಮಲಾ ರುದ್ರಾಕ್ಷಿ ಅವರು ಅತಿಥಿ ಉಪನ್ಯಾಸ ನೀಡಿ, ಡಾ. ಫ.ಗು. ಹಳಕಟ್ಟಿಯವರು ವಚನ ಸಾಹಿತ್ಯವನ್ನು ಸಂಗ್ರಹಿಸಿ ಉಳಿಸುವ ಮೂಲಕ ಕನ್ನಡ ನಾಡು-ನುಡಿಗೆ ಅಪಾರ ಸೇವೆ ಸಲ್ಲಿಸಿದ ಮರೆಯಲಾಗದ ಮಾಣಿಕ್ಯ ಎಂದು ಬಣ್ಣಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯಾಧ್ಯಾಪಕಿ ಶ್ರೀಮತಿ ಎಲ್.ಎಸ್. ಖೋತ ವಹಿಸಿ ಸಮಾರೋಪ ಭಾಷಣ ಮಾಡಿದರು. ಅಕ್ಕನ ಬಳಗದ ಉಪಾಧ್ಯಕ್ಷೆ ಶ್ರೀಮತಿ ವಿಜಯಾ ರೇವಡಿಗಾರ ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯರ ವಚನ ಗಾಯನದೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಕಾರ್ಯಕ್ರಮವನ್ನು ಶ್ರೀಮತಿ ಪಟ್ಟಣಶೆಟ್ಟಿ ಅವರು ನಿರೂಪಿಸಿದರು. ಶ್ರೀ ನರೇಗಲ್ ಅವರು ಸ್ವಾಗತಿಸಿದರು. ಶ್ರೀಮತಿ ಶಿವಲೀಲಾ ಸಂಬಣ್ಣನವರ ಮಕ್ಕಳಿಗೆ ಸಿಹಿ ವಿತರಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಸಿಬ್ಬಂದಿ, ವಿದ್ಯಾರ್ಥಿನಿಯರು ಹಾಗೂ ಕದಳಿ ಮಹಿಳಾ ವೇದಿಕೆಯ ಸದಸ್ಯರು ಭಾಗವಹಿಸಿದ್ದರು. ಕೊನೆಯಲ್ಲಿ ಕದಳಿ ಮಹಿಳಾ ವೇದಿಕೆ ಬಾಗಲಕೋಟೆ ಜಿಲ್ಲಾ ಘಟಕದ ಕಾರ್ಯದರ್ಶಿ ಶ್ರೀಮತಿ ವಿಜಯ ಲಕ್ಷ್ಮಿ ಭದ್ರಶೆಟ್ಟಿ ವಂದಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಬೀದಿ ಬದಿಯ ವ್ಯಾಪಾರಿಗಳ ಬದುಕುವ ಹಕ್ಕು ಹರಣವಾಗದಿರಲಿ

ಭಾರತದಲ್ಲಿ ಪಾದಚಾರಿ ಮಾರ್ಗ ಅಥವಾ ಫುಟ್‌ಪಾತ್‌ಗಳು ಆಗಾಗ ಸುದ್ದಿ ಮಾಡುತ್ತಿರುತ್ತವೆ. ರಸ್ತೆಗಳಲ್ಲಿ ಚಲಿಸಬೇಕಾದ ವಾಹನಗಳು ಫುಟ್‌ಪಾತ್‌ನಲ್ಲಿ ಚಲಿಸಿ ಅಮಾಯಕರ ಪ್ರಾಣವನ್ನು ಬಲಿತೆಗೆದುಕೊಳ್ಳುವುದು ಸರ್ವೇ ಸಾಮಾನ್ಯವಾಗಿದೆ. ಮಲಗುವುದಕ್ಕೆ ವ್ಯವಸ್ಥೆಯಿಲ್ಲದೆ ಫುಟ್‌ಪಾತನ್ನೇ ಆಶ್ರಯ ಪಡೆಯುವ ವಲಸೆ ಕಾರ್ಮಿಕರ ಮೇಲೆ ವಾಹನಗಳು ಹರಿದು ಸಾವು ನೋವುಗಳು ಸಂಭವಿಸಿದಾಗ ಫುಟ್‌ಪಾತ್‌ಗಳಿರುವುದು ಜನರು ನಿದ್ದೆ ಮಾಡುವುದಕ್ಕಲ್ಲ ಎನ್ನುವ ಆದೇಶ ನಾಗರಿಕರೆನಿಸಿಕೊಂಡವರಿಂದಲೇ ಹೊರ ಬೀಳುತ್ತದೆ. ಈ ಫುಟ್‌ಪಾತ್‌ಗಳಲ್ಲಿ ನಿದ್ದೆ ಮಾಡಬೇಕಾದ ಅನಿವಾರ್ಯ ಸ್ಥಿತಿ ಅವರಿಗೆ ನಿರ್ಮಾಣವಾಗಿರುವುದರ ಬಗ್ಗೆ ಯಾವುದೇ ಚರ್ಚೆ ನಡೆಯುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಫುಟ್‌ಪಾತ್ ನಿದ್ದೆ ಮಾಡುವುದಕ್ಕೆ ಇರುವ ಸ್ಥಳವಲ್ಲ ಎನ್ನುವುದು ಎಷ್ಟು ಸತ್ಯವೋ, ವಾಹನಗಳು ಓಡಾಡುವುದಕ್ಕೆ ಇರುವ ಜಾಗವೂ ಅಲ್ಲ ಎನ್ನುವುದನ್ನು ಇವರು ಮರೆಯುತ್ತಾರೆ. ಇತ್ತೀಚೆಗೆ ಸುಪ್ರೀಂಕೋರ್ಟ್ ಪಾದಚಾರಿ ಮಾರ್ಗದ ಬಗ್ಗೆ ಸ್ಪಷ್ಟ ತೀರ್ಪನ್ನು ನೀಡಿದೆ. ಪಾದಚಾರಿಗಳ ಹಕ್ಕಿಗೆ ಮಾನ್ಯತೆಯನ್ನು ನೀಡಿದೆ. ರಸ್ತೆ ಅಪಘಾತದಲ್ಲಿ ಶಾಲಾಬಾಲಕನೊಬ್ಬ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ ತೀರ್ಪು ನೀಡುತ್ತಾ, ವಿಶ್ವದಲ್ಲೇ ಅತ್ಯಧಿಕ ರಸ್ತೆ ಅಪಘಾತ ಸಾವುಗಳು ಭಾರತದಲ್ಲಿ ಸಂಭವಿಸುತ್ತಿದೆ. ರಸ್ತೆಗಳನ್ನು ನಿರ್ಮಿಸುವ ವಿಧಾನದಲ್ಲಿ ಪಾದಚಾರಿಗಳನ್ನು ನಿರ್ಲಕ್ಷಿಸಿರುವುದೇ ಇದಕ್ಕೆ ಕಾರಣ ಎಂದು ನ್ಯಾಯಾಲಯ ಅಭಿಪ್ರಾಯ ಪಟ್ಟಿದೆ. ಇದರ ಹಿಂದಿರುವ ಸಾಮಾಜಿಕ ಅಸಮಾನತೆಗಳನ್ನು ಗುರುತಿಸುವ ಪ್ರಯತ್ನವನ್ನೂ ಸುಪ್ರೀಂಕೋರ್ಟ್ ಮಾಡಿದೆ. ರಸ್ತೆ ಸುರಕ್ಷತೆಯ ವಿಷಯವು ಒಂದು ರೀತಿಯ ಗಣ್ಯರ ಕಬಳಿಕೆಯಾಗಿದೆ. ಇದರಲ್ಲಿ ಶ್ರೀಮಂತರು ಸಾರ್ವಜನಿಕ ಮೂಲಸೌಕರ್ಯಗಳನ್ನು ಬಳಸುವುದಕ್ಕೆ ಇತರರ ಅಗತ್ಯಗಳಿಗಿಂತ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಪಾದಚಾರಿಗಳು, ಸೈಕಲ್ ಸವಾರರನ್ನು ನಿರ್ಲಕ್ಷಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಪಾದಚಾರಿಗಳ ಹಕ್ಕನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಕೇವಲ ರಸ್ತೆಗಳನ್ನು ನಿರ್ಮಿಸುವ ವಿಧಾನದ ಒಂದು ಭಾಗವಾಗಿ ನಿರೀಕ್ಷಿಸದೆ, ಸಂವಿಧಾನದ ಅಡಿಯಲ್ಲಿ ಭಾರತಾದ್ಯಂತ ಮುಕ್ತವಾಗಿ ಸಂಚರಿಸುವ ಹಕ್ಕು ಮತ್ತು ಜೀವಿಸುವ ಹಕ್ಕುಗಳ ಮೂಲಕ ಖಾತರಿ ಪಡಿಸಲಾದ ಮೂಲಭೂತ ಹಕ್ಕೆಂದು ಪರಿಗಣಿಸಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.

ಭಾರತದಲ್ಲಿ ಪಾದಚಾರಿಗಳ ಹಕ್ಕುಗಳು ಸರಕಾರಕ್ಕೆ ನೆನಪಾಗುವುದು ಬೀದಿಬದಿಯ ವ್ಯಾಪಾರಿಗಳನ್ನು ತೆರವು ಮಾಡುವಾಗ ಮಾತ್ರ. ಗ್ರೇಟರ್ ಬೆಂಗಳೂರು ಅಭಿವೃದ್ಧಿ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಸಾರ್ವಜನಿಕರಿಗೆ ಸುರಕ್ಷಿತ, ಸುಗಮ ಹಾಗೂ ಅಡೆತಡೆಯಿಲ್ಲದ ಪಾದಚಾರಿ ಸಂಚಾರವನ್ನು ಕಲ್ಪಿಸುವ ಉದ್ದೇಶದಿಂದ ರಾಜ್ಯ ಸರಕಾರ ಹಮ್ಮಿಕೊಂಡಿರುವ ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನ ಈಗ ಚರ್ಚೆಯಲ್ಲಿದೆ. ಈ ಅಭಿಯಾನದ ಭಾಗವಾಗಿ ಬೀದಿ ಬದಿ ವ್ಯಾಪಾರಿಗಳನ್ನು ನಿಷ್ಕರುಣೆಯಿಂದ ಎಬ್ಬಿಸಲಾಗುತ್ತಿದೆ. ಅವರ ಮಾರಾಟ ಸರಕುಗಳು ಏಕಾಏಕಿ ಕಾರ್ಯಾಚರಣೆಗಳಿಗೆ ಬಲಿಯಾಗಿವೆ. ಪಾದಚಾರಿ ಮಾರ್ಗಗಳು ಸಾರ್ವಜನಿಕರ ಆಸ್ತಿಯಾಗಿದ್ದು ಅವುಗಳನ್ನು ಅತಿಕ್ರಮಣ ಮಾಡಿಕೊಂಡರೆ ನಾಗರಿಕರ ಓಡಾಟಕ್ಕೆ ಸಾಕಷ್ಟು ಸಮಸ್ಯೆ ಆಗಲಿದೆ. ನಾಗರಿಕರು ಯಾವುದೇ ಅಡೆತಡೆಯಿಲ್ಲದೆ ಸುರಕ್ಷಿತವಾಗಿ ಸಂಚರಿಸಲು ಅನುಕೂಲವಾಗುವಂತೆ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗಗಳನ್ನು ಮುಕ್ತಗೊಳಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸುತ್ತದೆ. ಬೀದಿ ಬದಿಯ ವ್ಯಾಪಾರಿಗಳ ಬದುಕುವ ಹಕ್ಕನ್ನು ಜನರು ಪ್ರತಿಪಾದಿಸುತ್ತಿದ್ದಂತೆಯೇ, ಸರಕಾರ ಪಾದಚಾರಿಗಳ ಹಕ್ಕನ್ನು ಗುರಾಣಿಯಾಗಿ ಬಳಸಿಕೊಳ್ಳುತ್ತಿದೆ. ನಗರದ ಸೌಂದರ್ಯ ಮತ್ತು ಪಾದಚಾರಿಗಳ ಹಕ್ಕುಗಳನ್ನು ರಕ್ಷಿಸುವುದಕ್ಕೆ ಈ ತೆರವು ಅನಿವಾರ್ಯ ಎಂದು ಸರಕಾರ ಹೇಳುತ್ತಿದೆ.

ಪಾದಚಾರಿ ಮಾರ್ಗಗಳಿರುವುದು ವ್ಯಾಪಾರ ಮಾಡುವುದಕ್ಕಲ್ಲ ಎನ್ನುವುದೂ ನಿಜ. ಆದರೆ, ಪಾದಚಾರಿಗಳ ಹಕ್ಕನ್ನು ಎತ್ತಿ ಹಿಡಿಯುವ ಸಂದರ್ಭದಲ್ಲಿ ಬೀದಿ ಬದಿ ವ್ಯಾಪಾರಿಗಳ ಬದುಕುವ ಹಕ್ಕನ್ನು ಸರಕಾರ ಕಿತ್ತುಕೊಂಡಂತಾಗಬಾರದು ಎನ್ನುವುದು ಮನುಷ್ಯತ್ವದ ಮೇಲೆ ನಂಬಿಕೆಯಿರುವ ಎಲ್ಲರ ಆಗ್ರಹವಾಗಿದೆ. ಬೀದಿ ಬದಿ ವ್ಯಾಪಾರಿಗಳು ಒಂದು ನಗರದ ಅಥವಾ ನಾಡಿನ ಆರ್ಥಿಕತೆಗೆ ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತಿರುತ್ತಾರೆ. ಒಂದು ನಗರ ಆರ್ಥಿಕವಾಗಿ ಚಟುವಟಿಕೆಯಲ್ಲಿರಲು ಇವರ ಪಾತ್ರ ಬಹುದೊಡ್ಡದಿದೆ. ಬೃಹತ್ ಮಾಲ್‌ಗಳಷ್ಟೇ ನಗರವಲ್ಲ. ನಗರಕ್ಕೆ ಪ್ರವೇಶಿಸುವ ಸಹಸ್ರಾರು ಬಡವರ್ಗದ ಜನರು ಈ ಮಾಲ್‌ಗಳೊಂದಿಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ. ಅವರು ಈ ಬೀದಿ ಬದಿಯ ವ್ಯಾಪಾರಿಗಳ ಜೊತೆಗೆ ವ್ಯವಹಾರ ಸಂಬಂಧವನ್ನು ಹೊಂದಿದವರಾಗಿದ್ದಾರೆ. ಬೀದಿ ಬದಿ ವ್ಯಾಪಾರವೆನ್ನುವುದು ಬಡವರಿಂದ-ಬಡವರಿಗೆ ಎನ್ನುವ ಹೊಂದಾಣಿಕೆಯಲ್ಲಿ ನಡೆಯುತ್ತದೆ. ಬಡವರ ಪಾಲಿಗೆ ನಗರಗಳು ತೆರೆಯುವುದೇ ಬೀದಿ ಬದಿಯ ವ್ಯಾಪಾರಿಗಳ ಮೂಲಕ. ಬೀದಿ ಬದಿಯ ವ್ಯಾಪಾರಿಗಳನ್ನು ತೆರವುಗೊಳಿಸುವುದು ಎಂದರೆ, ಅವರನ್ನು ನೆಚ್ಚಿಕೊಂಡ ಸಾವಿರಾರು ಕುಟುಂಬಗಳನ್ನು ಏಕಾಏಕಿ ಬೀದಿ ಪಾಲು ಮಾಡುವುದು ಎಂದರ್ಥ. ಯಾಕೆಂದರೆ ಒಂದು ಬೀದಿ ಬದಿ ಅಂಗಡಿಯನ್ನು ಆಶ್ರಯಿಸಿಕೊಂಡು ಒಂದು ಕುಟುಂಬವಿರುತ್ತದೆ. ಇದೀಗ ಮಳೆಗಾಲದ ಸಮಯ. ಶಾಲೆ, ಕಾಲೇಜುಗಳು ಆರಂಭವಾಗಿವೆ. ಬೀದಿ ಬದಿ ವ್ಯಾಪಾರಿಗಳಿಗೆ ತಮ್ಮ ಕುಟುಂಬ ಸದಸ್ಯರಿಗೆ ಸಂಬಂಧಿಸಿದ ಹತ್ತು ಹಲವು ಜವಾಬ್ದಾರಿಗಳಿರುತ್ತವೆ. ಬೀದಿ ಬದಿಯ ಅಂಗಡಿಗಳನ್ನು ಏಕಾಏಕಿ ತೆರವುಗೊಳಿಸುವುದೆಂದರೆ ಒಂದು ಹೊತ್ತಿನ ಊಟದಲ್ಲಿ ನೆಮ್ಮದಿಯನ್ನು ಕಾಣುತ್ತಿದ್ದ ಕುಟುಂಬದ ಕೈಯಿಂದ ಆ ಊಟವನ್ನು ಕಸಿದುಕೊಂಡು ಅವರನ್ನು ಬೀದಿಗೆ ತಳ್ಳಿದಂತೆ. ಈ ಹಿನ್ನೆಲೆಯಲ್ಲಿ ತೆರವು ಕಾರ್ಯಾಚರಣೆಗೆ ಮುನ್ನ ಅವರಿಗೆ ಪರ್ಯಾಯ ವ್ಯವಸ್ಥೆಯನ್ನು ಸರಕಾರ ಮಾಡಿಕೊಡುವುದು ಅತ್ಯಗತ್ಯವಾಗಿದೆ.

ಪಾದಚಾರಿ ಮಾರ್ಗ ಒತ್ತುವರಿ ತೆರವಿನ ಹೆಸರಿನಲ್ಲಿ ಬೀದಿ ಬದಿಯ ಅಂಗಡಿಗಳ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ಪ್ರಾಧಿಕಾರಕ್ಕೆ ಪಾದಚಾರಿ ಮಾರ್ಗಗಳನ್ನು ನುಂಗಿ ಹಾಕಿರುವ ಐಶಾರಾಮಿ ಕಾರುಗಳು, ವಾಹನಗಳು ಯಾಕೆ ಕಾಣಿಸುತ್ತಿಲ್ಲ ಎಂದು ಜನರು ಪ್ರಶ್ನಿಸುತ್ತಿದ್ದಾರೆ. ಇಂದು ನಗರಗಳಲ್ಲಿ ಅಕ್ರಮವಾಗಿ ಕಟ್ಟಿರುವ ಕಟ್ಟಡಗಳು ಪಾದಚಾರಿ ಮಾರ್ಗಗಳನ್ನು ಭಾಗಶಃ ನುಂಗಿ ಹಾಕಿವೆ. ಇಂತಹ ಅಕ್ರಮ ಕಟ್ಟಡಗಳ ಬಗ್ಗೆ ಸರಕಾರ ಯಾಕೆ ಮೃದು ನೀತಿ ಅನುಸರಿಸುತ್ತಿದೆ? ಎನ್ನುವ ಪ್ರಶ್ನೆಗೂ ಸರಕಾರ ಉತ್ತರಿಸಬೇಕಾಗುತ್ತದೆ. ನಗರಗಳು ಸುಂದರವಾಗುವುದು ಬೀದಿ ಬದಿಯಲ್ಲಿರುವ ವ್ಯಾಪಾರಿಗಳನ್ನು ತೆರವು ಗೊಳಿಸುವುದರಿಂದ ಅಲ್ಲ. ನಗರದ ಬೀದಿ ಬದಿಯಲ್ಲಿ ಅಪರಾಧ ಕೃತ್ಯಗಳನ್ನು ಎಸಗುವುದರ ವಿರುದ್ಧ ಕ್ರಮ ತೆಗೆದುಕೊಳ್ಳುವ ಮೂಲಕ. ಹೇಗೋ ಹೊಟ್ಟೆ ಬಟ್ಟೆ ಕಟ್ಟಿ ಬದುಕು ನಡೆಸುತ್ತಿರುವ ಬೀದಿ ಬದಿಯ ವ್ಯಾಪಾರಿಗಳ ಕೈಯಿಂದ ಅವರ ಬದುಕುವ ಹಕ್ಕನ್ನು ಕಸಿದುಕೊಂಡರೆ ಅವರು ಅನಿವಾರ್ಯವಾಗಿ ಅಪರಾಧ ಕೃತ್ಯಗಳಿಗೆ ಇಳಿಯುವ ಸ್ಥಿತಿ ನಿರ್ಮಾಣವಾದೀತು. ನಗರಗಳ ಬೀದಿ ಬದಿಗಳಲ್ಲಿ ರಾತ್ರಿ ನಮ್ಮ ಯುವಕರು ಪಿಕ್‌ಪಾಕೆಟ್ ಮಾಡುವುದು ಸೌಂದರ್ಯವೋ? ನಿಯತ್ತಿನಿಂದ ಎಳನೀರು, ಹಣ್ಣುಹಂಪಲು, ಹೂವುಗಳನ್ನು ಮಾರಿ ಬದುಕು ನಡೆಸುವುದು ಸೌಂದರ್ಯವೋ? ಸರಕಾರ ತೀರ್ಮಾನ ಮಾಡಬೇಕು.

20 ವರ್ಷ ಗೆಲ್ಲಿಸಿದವರನ್ನೇ ಬಾಂಗ್ಲಾದೇಶಿಗರು ಎಂದರಾ ಎಚ್‌ಡಿಕೆ?

ಈಗ ಯಾರನ್ನ ಬಾಂಗ್ಲಾದೇಶಿಗರು ಅಂತ ಕುಮಾರಸ್ವಾಮಿ ಅವರು ಕರೆಯುತ್ತಿದ್ದಾರೆಯೋ ಅದೇ ಮುಸ್ಲಿಮರು 20 ವರ್ಷಗಳ ಕಾಲ ಕುಮಾರಸ್ವಾಮಿ ಅವರಿಗೆ ಮತಹಾಕಿ, ನಿರಂತರವಾಗಿ ಗೆಲ್ಲಿಸಿದ್ದರು. ಆಗ, ಇವರಾರು ಬಾಂಗ್ಲಾದೇಶಿಗರು ಅಂತ ಕುಮಾರಸ್ವಾಮಿ ಅವರಿಗೆ ಅನ್ನಿಸಿರಲಿಲ್ಲ. ಆದ್ರೆ, ಈಗ ಅದೂ ಬಿಜೆಪಿ ಜೊತೆ ಸೇರಿದ ಮೇಲೆ ಈ ಮುಸ್ಲಿಂ ಜನ ಕುಮಾರಸ್ವಾಮಿ ಅವರ ಕಣ್ಣಿಗೆ ಬಾಂಗ್ಲಾದವರ ರೀತಿ ಕಾಣುತ್ತಿದ್ದಾರೆ.



ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಗುರುವಾರ ಧಾವಂತಕ್ಕೆ ಬಿದ್ದ ಪತ್ರಿಕಾಗೋಷ್ಠಿ ನಡೆಸಿದ್ದಾರೆ. ರಾಮನಗರದಲ್ಲಿ ಎಸ್‌ಐಆರ್ ಪ್ರಕ್ರಿಯೆಗಾಗಿ ಜನರನ್ನು ಒಟ್ಟಾಗಿ ಸೇರಿಸಿ ಎನ್ಯುಮರೇಷನ್ ಫಾರ್ಮ್‌ಗಳನ್ನು ಭರ್ತಿ ಮಾಡುತ್ತಿದ್ದ ವಿಡಿಯೋವನ್ನು ತೋರಿಸಿ, ಇಲ್ಲಿ ನೋಡಿ ರಾಮನಗರದಲ್ಲಿ ಬಿಎಲ್‌ಒಗಳು ಚೌಟ್ರಿಗಳಲ್ಲಿ ಕುಳಿತುಕೊಂಡು ಎನ್ಯುಮರೇಷನ್ ಫಾರ್ಮ್ ತುಂಬುತ್ತಿದ್ದಾರೆ. ಇವರೆಲ್ಲ ಒಂದು ಕೋಮುವಿಗೆ ಸೇರಿದವರು. ಇವರಲ್ಲಿ ಫೇಕ್ ಐಡಿಗಳು ಇರುವವರು, ಬಹುಶಃ ಬಾಂಗ್ಲಾದೇಶದಿಂದ ಬಂದವರು ಬಹಳ ಜನ ಇದ್ದಾರೆ. ಕನಿಷ್ಠ 8ರಿಂದ 10,000 ಬಾಂಗ್ಲಾದೇಶಿಗರು ರಾಮನಗರ-ಚನ್ನಪಟ್ಟಣ ಭಾಗದಲ್ಲಿದ್ದಾರೆ. ಕಳ್ಳಮತಗಳನ್ನು ಸೃಷ್ಟಿ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ತಮ್ಮ ಪಕ್ಷ ಜಾತ್ಯತೀತ ಜನತಾದಳ. ನಮ್ಮದು ಜಾತ್ಯತೀತವಾದ ಪಕ್ಷ ಎಂದು ಪುಂಖಾನುಪುಂಖ ಘೋಷಿಸುತ್ತಿದ್ದ ಎಚ್.ಡಿ ಕುಮಾರಸ್ವಾಮಿ ಅವರು ಈಗ ಬಿಜೆಪಿ ಮಡಿಲು ಸೇರಿದ್ದಾರೆ. ಬಿಜೆಪಿಯ ಧಾಟಿಯಲ್ಲೇ ಮಾತನಾಡುತ್ತಿದ್ದಾರೆ. ಬಿಜೆಪಿಯಂತೆಯೇ ಸುಳ್ಳು-ಆಧಾರರಹಿತ ಆರೋಪಗಳನ್ನು ಮಾಡುತ್ತಿದ್ದಾರೆ. ಇಷ್ಟು ವರ್ಷ ಕುಮಾರಸ್ವಾಮಿ ಅವರನ್ನು ಶಾಸಕರನ್ನಾಗಿ ಆಯ್ಕೆ ಮಾಡಿದ್ದ, ಮುಖ್ಯಮಂತ್ರಿ ಆಗೋದಕ್ಕೂ ಅವಕಾಶ ಮಾಡಿಕೊಟ್ಟಿದ್ದ ಇದೇ ರಾಮನಗರದ ಮುಸ್ಲಿಂ ಸಮುದಾಯವನ್ನ ಬಾಂಗ್ಲಾದೇಶಿಗರು, ಕಳ್ಳ ಮತದಾರರು ಅಂತ ಆರೋಪ ಮಾಡಿದ್ದು ಎಷ್ಟು ಸರಿ ಎಂಬ ಚರ್ಚೆ ನಡೆಯುತ್ತಿದೆ.

ವಾಸ್ತವ ಏನು ಗೊತ್ತೇ?

ಬಿಎಲ್‌ಒಗಳು ಮುಸ್ಲಿಂ ಜನರನ್ನು ಒಗ್ಗೂಡಿಸಿ ಎನ್ಯುಮರೇಷನ್ ಫಾರ್ಮ್ ತುಂಬುತ್ತಿರುವ ಸ್ಥಳ ಚೌಟ್ರಿ (ಕಲ್ಯಾಣ ಮಂಟಪ) ಅಲ್ಲ. ಅದು ಗ್ಲೋಬಲ್ ಪಬ್ಲಿಕ್ ಶಾಲೆ. ಅಲ್ಲಿ, ರಾಮನಗರ ನಗರಸಭೆಯ ವಾರ್ಡ್ 23ರ ಮತದಾರರನ್ನು ಸೇರಿಸಿ ಎನ್ಯುಮರೇಷನ್ ಫಾರ್ಮ್ ತುಂಬುವ ಈ ಸಭೆಯನ್ನ ಸ್ಥಳೀಯ ಕೌನ್ಸಿಲರ್ ಫಿರೋಜ್ ಆಯೋಜಿಸಿದ್ದರು. ಯಾಕೆ ಅಂದ್ರೆ, ಆ ವಾರ್ಡ್‌ನ ಬಹುಸಂಖ್ಯಾತರು ಕಾರ್ಮಿಕರು. ಬೆಳಗ್ಗೆ ಕೆಲಸಕ್ಕೆ ಹೋದರೆ, ಬರೋದು ಸಂಜೆಯೇ. ಬಿಎಲ್‌ಒಗಳು ಮನೆಗೆ ಬಂದಾಗ, ಇವರಾರೂ ಮನೆಯಲ್ಲಿ ಇರೋದಿಲ್ಲ. ಎನ್ಯುಮರೇಷನ್ ಫಾರ್ಮ್ ತುಂಬೋಕೂ ಆಗುವುದಿಲ್ಲ. ಹಾಗಾಗಿನೇ, ಅವರೆಲ್ಲ ಎಸ್‌ಐಆರ್ ಪ್ರಕ್ರಿಯೆಯಿಂದ ಹೊರಗುಳಿಬಾರದು ಅನ್ನೋ ಕಾರಣ ಸಂಜೆ 4 ಗಂಟೆ ನಂತರ ಬಿಎಲ್‌ಒಗಳನ್ನ ಕರೆಸಿ, ಮತದಾರರನ್ನೂ ಒಗ್ಗೂಡಿಸಿ ಎನ್ಯುಮರೇಷನ್ ತುಂಬುವ ಸಭೆಯನ್ನ ಫಿರೋಜ್ ಆಯೋಜಿಸಿದ್ದರು. ಅವರಾರೂ ಬಾಂಗ್ಲಾದೇಶಿಗರೂ ಅಲ್ಲ, ಅವರಿಗೆ ಬಂಗಾಳಿ ಭಾಷೆನೂ ಬರಲ್ಲ!

ಆದರೆ, ಈ ಸತ್ಯದ ಅರಿವೂ ಇಲ್ಲದ, ಸತ್ಯವನ್ನ ತಿಳಿದುಕೊಳ್ಳುವ ವ್ಯವದಾನವೂ ಇಲ್ಲದ ಕೋಮುವಾದಿ ಕಿಡಿಗೇಡಿಗಳು ಅದನ್ನ ವಿಡಿಯೋ ಮಾಡಿ, ಬಾಂಗ್ಲಾದೇಶಿ ಅಕ್ರಮ ವಲಸಿಗರೆಲ್ಲ ಒಂದೇ ಕಡೆ ಸೇರಿ, ಎನ್ಯುಮರೇಷನ್ ಫಾರ್ಮ್ ತುಂಬುತ್ತಿದ್ದಾರೆ ಅಂತ ಪುಕಾರು ಹಬ್ಬಿಸಿದ್ದಾರೆ. ಅದೇ ವಿಡಿಯೋವನ್ನು ಇಟ್ಟುಕೊಂಡು ತಾವೊಬ್ಬ ಕೇಂದ್ರ ಸಚಿವ, ಏನೇ ಮಾತನಾಡೋದಕ್ಕೂ ಮುನ್ನ ಸತ್ಯವೇನು ಅಂತ ಪರಿಶೀಲನೆ ಮಾಡಬೇಕು ಅನ್ನುವ ಸಾಮಾನ್ಯ ಪರಿಜ್ಞಾನವೂ ಇಲ್ಲದೆ ಕುಮಾರಸ್ವಾಮಿ ಅವರು ದಿಢೀರ್ ಪತ್ರಿಕಾಗೋಷ್ಠಿ ಕರೆದು, ರಾಮನಗರದಲ್ಲಿ 10,000 ಬಾಂಗ್ಲಾದೇಶಿಗರಿದ್ದಾರೆ. ಅವರೆಲ್ಲ ಕಳ್ಳ ಮತದಾರರು, ಮಣ್ಣು-ಮಸಿ ಅಂತ ಸುಳ್ಳುಗಳ ಸರಮಾಲೆ ಹೆಣೆದೇ ಬಿಟ್ಟರು.

ಇನ್ನೊಂದು ಮುಖ್ಯವಿಚಾರ ಏನು ಅಂದ್ರೆ, ಇದೇ ರಾಮನಗರದಲ್ಲಿ ಎಚ್.ಡಿ ಕುಮಾರಸ್ವಾಮಿ ಅವರು 2004ರಿಂದ 2018ರ ವಿಧಾನಸಭಾ ಚುನಾವಣೆವರೆಗೆ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. 2018ರಲ್ಲಿ ರಾಮನಗರ-ಚನ್ನಪಟ್ಟಣ ಎರಡೂ ಕಡೆ ಗೆದ್ದ ಕುಮಾರಸ್ವಾಮಿ ಅವರು ರಾಮನಗರ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ತಮ್ಮ ಪತ್ನಿ ಅನಿತಾ ಕುಮಾರಸ್ವಾಮಿ ಅವರನ್ನ ಕಣಕ್ಕಿಳಿಸಿದ್ದರು. ಅನಿತಾ ಅವರೂ ರಾಮನಗರದಿಂದ ಗೆದ್ದು ಶಾಸಕಿಯಾಗಿದ್ದರು. ಇವರ ಈ 20 ವರ್ಷಗಳ ರಾಜಕೀಯಕ್ಕೆ ಮಣ್ಣು-ಗೊಬ್ಬರ ಎರೆದದ್ದೇ ರಾಮನಗರ ಮತ್ತು ಅಲ್ಲಿನ ಮುಸ್ಲಿಮರೂ ಕೂಡ.

ಈಗ ಯಾರನ್ನ ಬಾಂಗ್ಲಾದೇಶಿಗರು ಅಂತ ಕುಮಾರಸ್ವಾಮಿ ಅವರು ಕರೆಯುತ್ತಿದ್ದಾರೆಯೋ ಅದೇ ಮುಸ್ಲಿಮರು 20 ವರ್ಷಗಳ ಕಾಲ ಕುಮಾರಸ್ವಾಮಿ ಅವರಿಗೆ ಮತಹಾಕಿ, ನಿರಂತರವಾಗಿ ಗೆಲ್ಲಿಸಿದ್ದರು. ಆಗ, ಇವರಾರು ಬಾಂಗ್ಲಾದೇಶಿಗರು ಅಂತ ಕುಮಾರಸ್ವಾಮಿ ಅವರಿಗೆ ಅನ್ನಿಸಿರಲಿಲ್ಲ. ಆದ್ರೆ, ಈಗ ಅದೂ ಬಿಜೆಪಿ ಜೊತೆ ಸೇರಿದ ಮೇಲೆ ಈ ಮುಸ್ಲಿಂ ಜನ ಕುಮಾರಸ್ವಾಮಿ ಅವರ ಕಣ್ಣಿಗೆ ಬಾಂಗ್ಲಾದವರ ರೀತಿ ಕಾಣುತ್ತಿದ್ದಾರೆ.

2023ರ ವಿಧಾನಸಭಾ ಚುನಾವಣೆ ಸಮಯದಲ್ಲಿ ತಮ್ಮ ಜೆಡಿಎಸ್, ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಾಗ ಕುಮಾರಸ್ವಾಮಿ ಮತ್ತು ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಒಂದು ಹೇಳಿಕೆ ಕೊಟ್ಟಿದ್ದರು. ಅದೇನಂದ್ರೆ; ''ನಾನು ಬಿಜೆಪಿ ಜೊತೆ ಕೈಜೋಡಿಸಿರಬಹುದು, ಆದರೆ ನನ್ನ ಜಾತ್ಯತೀತ ಸಿದ್ಧಾಂತವನ್ನು ಬಿಟ್ಟಿಲ್ಲ. ನನ್ನ ಹಿಂದಿನ ಮುಖ್ಯಮಂತ್ರಿ ಅವಧಿಯಲ್ಲಿ ರಾಜ್ಯದಲ್ಲಿ ಯಾವುದೇ ಕೋಮು ಗಲಭೆ ನಡೆಯಲು ನಾನು ಬಿಟ್ಟಿರಲಿಲ್ಲ. ಮುಂದೆಯೂ ಮುಸ್ಲಿಂ ಸಮುದಾಯದ ಹಿತಾಸಕ್ತಿ ಹಾಗೂ ರಕ್ಷಣೆಗೆ ಧಕ್ಕೆ ಬಾರದಂತೆ ನಾನು ನೋಡಿಕೊಳ್ಳುತ್ತೇನೆ'' ಅಂತ ಕುಮಾರಸ್ವಾಮಿ ಹೇಳಿದ್ದರು.

ಆದರೆ, ಈಗ 20 ವರ್ಷಗಳ ಕಾಲ ತಮ್ಮನ್ನೇ ಗೆಲ್ಲಿಸಿದ್ದ ಅದೇ ಮುಸ್ಲಿಮರನ್ನ ಬಾಂಗ್ಲಾದವರು, ಕಳ್ಳಮತದಾರರು ಎನ್ನುತ್ತಿದ್ದಾರೆ. ಸ್ಥಳೀಯ ಮತದಾರರ ಪೌರತ್ವವನ್ನು ಪ್ರಶ್ನಿಸಿರುವ ಅವರ ಹೇಳಿಕೆ ಅಕ್ಷರಶಃ ರಾಜಕೀಯ ಪ್ರೇರಿತ ಮತ್ತು ತೀವ್ರ ಹತಾಶೆಯಿಂದ ಕೂಡಿದ್ದು. ಇತ್ತೀಚಿನ ವರ್ಷಗಳಲ್ಲಿ ರಾಮನಗರ, ಚನ್ನಪಟ್ಟಣಗಳಲ್ಲಿ ತಮಗಾಗುತ್ತಿರುವ ರಾಜಕೀಯ ಹಿನ್ನಡೆಯಿಂದ ಕುಮಾರಸ್ವಾಮಿ ಅವರು ಹತಾಶರಾಗಿದ್ದಾರೆ. ಇಷ್ಟು ದಿನ ತಮಗೆ ಮತ ಹಾಕಿದವರು, ಈಗ ತಮ್ಮ ವಿರೋಧಿಗಳಿಗೆ ಮತ ಹಾಕುತ್ತಿದ್ದಾರೆ ಎಂಬ ಅಸಹನ ಅವರಲ್ಲಿ ಢಾಳಾಗಿದೆ.

ಕುಮಾರಸ್ವಾಮಿ ಅವರ ಈ ಹತಾಶೆಯ ಮೂಲ ಇರುವುದು 2023ರ ವಿಧಾನಸಭಾ ಚುನಾವಣೆಯ ಫಲಿತಾಂಶದಲ್ಲಿ. ತಮ್ಮ ಭದ್ರಕೋಟೆ, ತಮ್ಮ ಕುಟುಂಬದಲ್ಲಿ ಯಾರೇ ಗೆದ್ದರೂ ರಾಮನಗರ ಮಂದಿ ಮತಹಾಕಿ, ನಮ್ಮನ್ನ ವಿಧಾನಸೌಧಕ್ಕೆ ಕಳಿಸುತ್ತಾರೆ ಎಂಬ ಭ್ರಾಂತಿ ಕುಮಾರಸ್ವಾಮಿ ಅವರಿತ್ತು. ಜೊತೆಗೆ, 2019ರಲ್ಲಿ ಮಂಡ್ಯ ಲೋಕಸಭೆ ಚುನಾವಣೆಯಲ್ಲಿ ಸೋತಿದ್ದ ತಮ್ಮ ಮಗ ನಿಖಿಲ್‌ಗೂ ರಾಜಕೀಯ ನೆಲೆ ಒದಗಿಸಬೇಕು ಅನ್ನೋ ಧಾವಂತ ಇತ್ತು. 2023ರಲ್ಲಿ ನಿಖಿಲ್‌ನನ್ನು ರಾಮನಗರದಲ್ಲಿ ಅವರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದ್ದರು. ಆದರೆ, ರಾಮನಗರದ ಪ್ರಬುದ್ಧ ಮತದಾರರು ಅವರನ್ನು ಸಂಪೂರ್ಣವಾಗಿ ತಿರಸ್ಕರಿಸಿ, ಸೋಲಿನ ರುಚಿ ತೋರಿಸಿದರು. ತಮ್ಮದೇ ಹಿಡಿತದಲ್ಲಿದ್ದ ಹಳೆಯ ಸಾಮ್ರಾಜ್ಯದಲ್ಲಿ ಸ್ವಂತ ಮಗನ ಈ ಹೀನಾಯ ಸೋಲು ಕುಮಾರಸ್ವಾಮಿ ಅವರಿಗೆ ವೈಯಕ್ತಿಕವಾಗಿ ಮತ್ತು ರಾಜಕೀಯವಾಗಿ ಅರಗಿಸಿಕೊಳ್ಳಲಾಗದ ತೀವ್ರ ಆಘಾತ ನೀಡಿತು.

ಜೊತೆಗೆ, ಇತ್ತೀಚಿನ ರಾಜ್ಯ ರಾಜಕೀಯದಲ್ಲಿ ಬದಲಾವಣೆಗಳು ಒಕ್ಕಲಿಗ ಸಮುದಾಯದ ನಾಯಕತ್ವದ ವಿಚಾರದಲ್ಲಿ ಕುಮಾರಸ್ವಾಮಿ ಅವರಿಗೆ ಅಭದ್ರತೆಯನ್ನು ಸೃಷ್ಟಿಸಿವೆ. ಹಳೇ ಮೈಸೂರು ಭಾಗದಲ್ಲಿ ಮತ್ತು ಒಕ್ಕಲಿಗ ಸಮುದಾಯದ ಪ್ರಭಾವಿಗಳಲ್ಲಿ ಒಬ್ಬರಾದ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆದ ಮೇಲೆ, ತಮ್ಮ ಸಾಂಪ್ರದಾಯಿಕ ಒಕ್ಕಲಿಗ ಮತಬ್ಯಾಂಕ್ ಸಂಪೂರ್ಣವಾಗಿ ಕಾಂಗ್ರೆಸ್‌ನತ್ತ ತಿರುಗುತ್ತದೆ ಅನ್ನೋ ಭೀತಿ ಕುಮಾರಸ್ವಾಮಿ ಅವರಿಗೆ ಎದುರಾಗಿದೆ. ರಾಮನಗರವನ್ನ ತಾವು ಕಳೆದುಕೊಂಡರೆ ಮುಂದೇನು ಅಂತ ಆತಂಕ ಅವರಿಗಿದೆ.

ಯಾಕೆ ಅಂದ್ರೆ, ಕುಮಾರಸ್ವಾಮಿ ಅವರಿಗೆ ತಮ್ಮದೇ ಸ್ವಂತ ಜಿಲ್ಲೆ ಹಾಸನಕ್ಕೆ ಎಂಟ್ರಿಯೇ ಇಲ್ಲ. ಅಲ್ಲಿ ಅವರ ಅಣ್ಣ ಎಚ್.ಡಿ. ರೇವಣ್ಣನದ್ದೇ ತೀವ್ರ ಹಿಡಿತ. ಅಲ್ಲಿ ಕುಮಾರಸ್ವಾಮಿ ಮತ್ತು ಅವರ ಕುಟುಂಬ ರಾಜಕೀಯವಾಗಿ ಕಾಲಿಡೋದಕ್ಕೆ ರೇವಣ್ಣ ಬಿಡೋದಿಲ್ಲ. ಇತ್ತ ಮಂಡ್ಯದ ವಾಸ್ತವಗಳು ಬದಲಾಗಿದೆ. ಕುಮಾರಸ್ವಾಮಿ ಅವರ ಕುಟುಂಬದವರಿಗೆ ಮಂಡ್ಯದಲ್ಲಿ ಜನ ಅವಕಾಶ ಕೊಡೋದಿಲ್ಲ. ಹಾಸನ, ರಾಮನಗರ ಮತ್ತು ಮಂಡ್ಯದಲ್ಲಿ ಕಾಂಗ್ರೆಸ್ ಬಲ ಹೆಚ್ಚಾಗುತ್ತಿದೆ. ಇದೆಲ್ಲವೂ ಕುಮಾರಸ್ವಾಮಿ ಅವರಿಗೆ ಅಭದ್ರತೆ ಸೃಷ್ಟಿಸಿದೆ. ತಮಗೆ ಭವಿಷ್ಯದಲ್ಲಿ ಬಲವಾದ ರಾಜಕೀಯ ಅಸ್ತಿತ್ವವೇ ಉಳಿಯುವುದಿಲ್ಲ ಎಂಬ ಸತ್ಯ ಕುಮಾರಸ್ವಾಮಿ ಅವರಿಗೆ ಮನವರಿಕೆಯಾಗಿದೆ.

ಈ ಅಭದ್ರತೆಯಲ್ಲಿರುವ ಕುಮಾರಸ್ವಾಮಿ, ರಾಮನಗರವನ್ನು ಹೇಗಾದರೂ ತಮ್ಮ ಹಿಡಿತದ್ದೇ ಉಳಿಸಿಕೊಳ್ಳಬೇಕು ಅನ್ನೋ ಧಾವಂತ ಇದೆ. ಅದಕ್ಕಾಗಿ, ಬಿಜೆಪಿ ಹಾದಿಯಲ್ಲಿ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತ ಮತದಾರರ ನಡುವೆ ಬಿರುಕು ಮೂಡಿಸುವ ಕೋಮು ಧ್ರುವೀಕರಣದ ತಂತ್ರಕ್ಕೆ ಶರಣಾಗಿದ್ದಾರೆ.

ಹಾಗೆ ನೋಡಿದ್ರೆ, ಬಿಜೆಪಿ ಈ ಹಿಂದೆ ಬಿಹಾರ ಮತ್ತು ಪಶ್ಚಿಮ ಬಂಗಾಳದ ಗಡಿ ಜಿಲ್ಲೆಗಳಲ್ಲಿ ಲಕ್ಷಾಂತರ ಬಾಂಗ್ಲಾದೇಶಿ ಹಾಗೂ ರೋಹಿಂಗ್ಯಾ ನುಸುಳುಕೋರರು ಅಕ್ರಮವಾಗಿ ನೆಲೆಸಿದ್ದಾರೆ. ಅವರೆಲ್ಲ ಭಾರತೀಯ ಮತದಾರರ ಪಟ್ಟಿಗೆ ಸೇರಿಕೊಂಡಿದ್ದಾರೆ ಎಂದು ಭಾರಿ ಪ್ರಚಾರ ಮಾಡಿತ್ತು. ಎಸ್‌ಐಆರ್ ಮೂಲಕ ನುಸುಳುಕೋರರು ಹಿಡಿದು ಹಾಕಲಾಗುತ್ತದೆ ಅಂತನೂ ಬಡಬಡಾಯಿಸಿತ್ತು.

ಆದರೆ, ಎಸ್‌ಐಆರ್‌ನಲ್ಲಿ ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ 1.5 ಕೋಟಿ ಮತದಾರರನ್ನು ಮತಪಟ್ಟಿಯಿಂದ ಹೊರಹಾಕಲಾಗಿದೆ. ಆದರೆ, ಅವರಲ್ಲಿ ಪತ್ತೆಯಾದ ನುಸುಳುಕೋರರ ಸಂಖ್ಯೆ ಎಷ್ಟು ಗೊತ್ತೇ? ಕೇವಲ ನಾಲ್ಕೈದು ಮಂದಿ ಮಾತ್ರ. ಇದು ಗುಡ್ಡ ಅಗೆದು ಇಲಿ ಹಿಡಿದಂತಿದೆ.

ಬಾಂಗ್ಲಾ ಗಡಿಯಲ್ಲಿರುವ ಬಿಹಾರ, ಪಶ್ಚಿಮ ಬಂಗಾಳದಲ್ಲೇ ಬಾಂಗ್ಲಾ ಪ್ರಜೆಗಳು, ನುಸುಳುಕೋರರು ಇಲ್ಲದಿರುವಾಗ, ಕರ್ನಾಟಕದಲ್ಲಿ ಅದರಲ್ಲೂ ರಾಮನಗರದಲ್ಲಿ 10,000 ಬಾಂಗ್ಲಾದೇಶಿಗರು ಬಂದುಬಿಡುವರೇ? 10,000 ಬಾಂಗ್ಲಾದೇಶಿಗರು ಇದ್ದಾರೆ ಎನ್ನುವ ಕುಮಾರಸ್ವಾಮಿ ಅವರೇ, ''ನೀವು ಕೇಂದ್ರ ಸಚಿವರಾಗಿದ್ದೀರಿ. ರಾಮನಗರದಲ್ಲಿ ನಿಜಕ್ಕೂ ಬಾಂಗ್ಲಾದೇಶಿ ಪ್ರಜೆಗಳು ಇದ್ದರೆ, ಅವರನ್ನು ಗುರುತಿಸಿ, ಪ್ರಕರಣ ದಾಖಲಿಸಿ, ಬಂಧಿಸಿ, ಬಾಂಗ್ಲಾಗೆ ವಾಪಸ್ ಕಳಿಸಿ. ಆ ತಾಕತ್ತು ನಿಮಗೆ ಇದೆ ಅಲ್ವೇ. ಆದರೆ, ಅವರನ್ನ ಬಾಂಗ್ಲಾದೇಶಿಗರು ಅನ್ನೋದಕ್ಕೆ ನಿಮ್ಮತ್ರ ಪುರಾವೆ ಇಲ್ಲ. ಯಾಕಂದ್ರೆ ನೀವು ಹೇಳ್ತಿರೋದೇ ಸುಳ್ಳು''.

ಮತ್ತೊಂದು ವಿಚಾರವೆಂದರೆ, ಕರ್ನಾಟಕದಲ್ಲಿ ಬಿಜೆಪಿ ತನ್ನದೇ ಆಂತರಿಕ ಕಚ್ಚಾಟದಲ್ಲಿ ಒದ್ದಾಡುತ್ತಿದೆ. ಪ್ರಬಲ ನಾಯಕತ್ವ ಇಲ್ಲದೆ ಹೆಣಗಾಡುತ್ತಿದೆ. ಆದ್ದರಿಂದ, ಕುಮಾರಸ್ವಾಮಿ ಅವರು ಬಿಜೆಪಿಯ ಮೌತ್ ಪೀಸ್ ಆಗಿದ್ದಾರೆ. ಬಿಜೆಪಿ ರೂಪಿಸುವ ಕೋಮುವಾದಿ ದ್ವೇಷವನ್ನ ಕುಮಾರಸ್ವಾಮಿ ಅವರು ಹರಿಬಿಡೋದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದು ಕುಮಾರಸ್ವಾಮಿ ಅವರು ಅಸೂಯೆ, ಅಸಹನೆ, ಅಭದ್ರತೆ ಹಾಗೂ ಹತಾಶೆಯಲ್ಲದೆ ಬೇರೇನೂ ಅಲ್ಲ.

ಭಿನ್ನಾಭಿಪ್ರಾಯಕ್ಕೆ ಆರ್ಥಿಕ ದಂಡನೆ: ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಾಂವಿಧಾನಿಕ ತೆರಿಗೆ!

ದೇಶದ ದೇಶದ್ರೋಹ ಮತ್ತು ಭಯೋತ್ಪಾದನಾ ವಿರೋಧಿ ಕಾನೂನುಗಳನ್ನು ಹಲವು ಬಾರಿ ಅಷ್ಟೊಂದು ಹೆಸರುವಾಸಿಯಲ್ಲದವರ, ದಮನಿತರ ವಿರುದ್ಧವೇ ಪ್ರಯೋಗಗೊಂಡಿರುವುದು. ಅರ್ಥಶಾಸ್ತ್ರಜ್ಞರು ಹೇಳುವಂತೆ ಕಾನೂನು ಬಹುಪಾಲು ಒಂದು ತೆರಿಗೆಯಂತೆಯೇ ಕಾರ್ಯನಿರ್ವಹಿಸುತ್ತದೆ. ಹಾಗಾಗಿ, ಸಾಂವಿಧಾನಿಕವಾಗಿ ಮತ್ತು ಆರ್ಥಿಕವಾಗಿ ಎರಡೂ ದೃಷ್ಟಿಯಿಂದ ನೋಡಿದಾಗ ದೇಶದ ಭವಿಷ್ಯ ತೀರ ಅನಿಶ್ಚಿತವಾಗಿ ಕಾಣುತ್ತಿದೆ.

ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಮ್ಮೆ ಭಾರತದ್ದು. ಆದರೆ ದೇಶದಲ್ಲಿರುವ ಭಯೋತ್ಪಾದನಾ ನಿರೋಧಿ ಕಾನೂನುಗಳು ಈ ಹೆಮ್ಮೆಗೆ ತದ್ವಿರುದ್ಧವಾಗಿ ನಮ್ಮಲ್ಲಿ ಕಳವಳವನ್ನು ಮೂಡಿಸುತ್ತವೆ. ಯಾವುದೇ ಆರೋಗ್ಯಕರ ಪ್ರಜಾಪ್ರಭುತ್ವದಲ್ಲಿ ಇರಬೇಕಾದ ಮೂಲಭೂತ ಹಕ್ಕು ಅಭಿವ್ಯಕ್ತಿ ಸ್ವಾತಂತ್ರ್ಯ. ಆದರೆ ವಿಶ್ವದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿರುವ ಈ ಕಾನೂನುಗಳು ಹಂತ-ಹಂತವಾಗಿ ಮೂಲಭೂತ ಹಕ್ಕುಗಳನ್ನೇ ಕಾನೂನುಬಾಹಿರಗೊಳಿಸುತ್ತಿದೆ.

ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆ (), 1967, ಮತ್ತು ಭಾರತೀಯ ನ್ಯಾಯ ಸಂಹಿತೆ, 2024 ರ ಸೆಕ್ಷನ್ 152 ರ ಅಡಿಯಲ್ಲಿ ಬರುವ ದೇಶದ್ರೋಹದ ಕಾನೂನು (ಹಿಂದಿನ ಭಾರತೀಯ ದಂಡ ಸಂಹಿತೆ, 1860 ರ ಸೆಕ್ಷನ್ 124), ಇವೆರಡೂ ಕೇಂದ್ರದ ವಿರುದ್ಧ ಭಿನ್ನಾಭಿಪ್ರಾಯ ಹೊಂದಿರುವವರೇ ಅಪರಾಧಿಗಳು ಎಂಬಂತೆ ಬಿಂಬಿಸುವ ಕಾನೂನುಗಳು. ಈ ಕಾನೂನುಗಳ ದುರ್ಬಳಕೆಯನ್ನು ಕೇವಲ ಸಾಂವಿಧಾನಿಕ ವೈಫಲ್ಯ ಎಂದು ಮಾತ್ರವಲ್ಲದೆ, ಆರ್ಥಿಕ ವೈಫಲ್ಯ ಎಂದೂ ಹೇಳಬಹುದು.

ಬ್ರಿಟಿಷರು ಭಾರತೀಯ ರಾಷ್ಟ್ರೀಯ ಚಳವಳಿಯನ್ನು ಹತ್ತಿಕ್ಕಲು ದೇಶದ್ರೋಹದ ಕಾನೂನನ್ನು (ಸೆಕ್ಷನ್ 124) ಜಾರಿಗೆ ತಂದಿದ್ದರು. ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರ ವಿರುದ್ಧ ಈ ಕಾನೂನು ಬಳಸಲಾಗಿತ್ತು. ಬ್ರಿಟಿಷ್ ಆಡಳಿತದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುವ ಯಾವುದೇ ವ್ಯಕ್ತಿಗೆ ಗರಿಷ್ಠ ಜೀವಾವಧಿ ಶಿಕ್ಷೆಯನ್ನು ವಿಧಿಸುವ ಅವಕಾಶವನ್ನು ಈ ಕಾನೂನು ಹೊಂದಿತ್ತು. ಭಾರತ ಸ್ವತಂತ್ರಗೊಂಡ ಬಳಿಕವೂ ಇದೇ ಕಾನೂನು ಮುಂದುವರೆಯಿತು.

1962ರ ಕೇದಾರ್ ನಾಥ್ ಸಿಂಗ್ ವರ್ಸಸ್ ಬಿಹಾರ್ ರಾಜ್ಯ ಪ್ರಕರಣದಲ್ಲಿ, ಸುಪ್ರೀಂ ಕೋರ್ಟ್ ಸೆಕ್ಷನ್ 124 ರ ಸಿಂಧುತ್ವವನ್ನು ಎತ್ತಿಹಿಡಿಯಿತು. ಆದರೆ, ನೇರವಾಗಿ ಹಿಂಸಾಚಾರ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರುವಂತಹ ಪ್ರಚೋದನಾಕಾರಿ ಭಾಷಣಗಳಿಗೆ ಮಾತ್ರ ಈ ಕಾನೂನು ಅನ್ವಯಿಸುತ್ತದೆ. ಸರ್ಕಾರವನ್ನು ಎಷ್ಟೇ ತೀಕ್ಷ್ಣವಾಗಿ ಟೀಕಿಸಿದ್ದರೂ ಅದು ಸೆಕ್ಷನ್ 124ರ ಅಡಿಯಲ್ಲಿ ಬರದು ಎಂದು ಸ್ಪಷ್ಟಪಡಿಸಿತ್ತು. ಸುಪ್ರೀಂ ಕೋರ್ಟ್ ಈ ಎಚ್ಚರಿಕೆ ನೀಡಿದ್ದರೂ ಸರ್ಕಾರಗಳು ಮಾತ್ರ ನಿರಂತರವಾಗಿ ಆದೇಶವನ್ನು ನಿರ್ಲಕ್ಷಿಸುತ್ತಲೇ ಬಂದಿದೆ. ಆದಿವಾಸಿಗಳು, ಸಾಮಾಜಿಕ ಕಾರ್ಯಕರ್ತರು ಮತ್ತು ಪ್ರತಿಭಟನಾಕಾರರ ವಿರುದ್ಧ ಈ ಸೆಕ್ಷನ್ ಪ್ರಯೋಗಿಸಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ () 2014ರಲ್ಲಿ ದೇಶದ್ರೋಹದ ಪ್ರಕರಣಗಳನ್ನು ಪತ್ತೆಹಚ್ಚಲು ಪ್ರಾರಂಭಿಸಿದಾಗ ದೊರೆತ ಅಂಕಿ-ಅಂಶಗಳು ಕಾನೂನು ದುರುಪಯೋಗದ ಸ್ಪಷ್ಟವಾದ ಚಿತ್ರಣವನ್ನು ನೀಡಿದೆ. 2014 ಮತ್ತು 2019ರ ನಡುವೆ ದಾಖಲಾದ 326 ಪ್ರಕರಣಗಳಲ್ಲಿ ಕೇವಲ ಆರು ಪ್ರಕರಣಗಳಲ್ಲಿ ಮಾತ್ರ ಅಪರಾಧ ಸಾಬೀತಾಗಿದೆ. ಉಳಿದಂತೆ ಅರ್ಧಕ್ಕಿಂತ ಹೆಚ್ಚು ಪ್ರಕರಣಗಳಲ್ಲಿ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಕೆಯೂ ಆಗಿರಲಿಲ್ಲ. 2022ರ ವೊಂಬತ್ಕೆರೆ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಈ ಕಳವಳಗಳನ್ನು ಒಪ್ಪಿಕೊಂಡು, ಸೆಕ್ಷನ್ 124 ಅಡಿಯಲ್ಲಿನ ಎಲ್ಲಾ ಹೊಸ ಪ್ರಕರಣಗಳಿಗೆ ತಡೆಯಾಜ್ಞೆ ನೀಡಿತು. ಅಲ್ಲದೆ, ಈ ನಿಬಂಧನೆಯು ಪ್ರಸ್ತುತ ಸಾಮಾಜಿಕ ಪರಿಸರಕ್ಕೆ ಹೊಂದಿಕೆಯಾಗುತ್ತಿಲ್ಲ ಎಂದೂ ಹೇಳಿತು.

ಆದರೆ ಇದಕ್ಕೆ ಶಾಸಕಾಂಗ ಮಾಡಿದ್ದೇನು? ಶಾಸಕಾಂಗ ಈ ನಿಬಂಧನೆಯನ್ನು ಮರುನಾಮಕರಣ ಮಾಡಿತೇ ಹೊರತು ಸುಧಾರಣೆ ಮಾಡಿಲ್ಲ. ಭಾರತೀಯ ನ್ಯಾಯ ಸಂಹಿತೆಯಡಿಯಲ್ಲಿ ಸೆಕ್ಷನ್ 124ರ ಬದಲಿಗೆ ಸೆಕ್ಷನ್ 152 ಅನ್ನು ತರಲಾಗಿದೆ. ಈ ಸೆಕ್ಷನ್ ಪ್ರಕಾರ ದೇಶದ ಸಾರ್ವಭೌಮತೆ, ಏಕತೆ ಅಥವಾ ಸಮಗ್ರತೆಗೆ ಧಕ್ಕೆ ತರುವಂತಹ ಕೃತ್ಯಗಳು ಅಪರಾಧ. ಕೇಂದ್ರ ಸರ್ಕಾರವು ಇದನ್ನು ರಾಜದ್ರೋಹದಿಂದ ದೇಶದ್ರೋಹಕ್ಕೆ ಬದಲಾದ ರೂಪ ಎಂದು ಬಂಬಿಸಿದೆ. ಆದರೆ ಕಾನೂನು ತಜ್ಞರ ಪ್ರಕಾರ ಇದು ಹೊಸ ಬಾಟಲಿಯಲ್ಲಿ ಹಳೆಯ ಹೆಂಡ ಅಂದರೆ ಹೆಸರು ಬದಲಾದರೂ ಗುಣ ಬದಲಾಗಿಲ್ಲ.

ಪ್ರತ್ಯೇಕತಾವಾದಿ ಸಂಘಟನೆಗಳನ್ನು ನಿಯಂತ್ರಿಸಲು 1967ರಲ್ಲಿ ಜಾರಿಗೆ ತರಲಾದ (ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆ), ಕಾಲಾನಂತರದಲ್ಲಿ ಗಮನಾರ್ಹ ತಿದ್ದುಪಡಿಗಳಿಗೆ ಒಳಪಟ್ಟಿದೆ. ಹಂತ ಹಂತವಾಗಿ ನಡೆದ ಈ ತಿದ್ದುಪಡಿಗಳು ಜನರ ಹಕ್ಕುಗಳನ್ನು ಕಡಿತಗೊಳಿಸಿದೆ. ಈ ಮೂಲಕ ಸರ್ಕಾರದ ಅಧಿಕಾರವನ್ನು ವಿಸ್ತರಿಸುತ್ತಲೇ ಬಂದಿವೆ. 2019ರಲ್ಲಾದ ತಿದ್ದುಪಡಿಯು ಅತ್ಯಂತ ತೀವ್ರ ಸ್ವರೂಪದ್ದು. ಯಾವುದೇ ಅಪರಾಧ ನಡೆಯದಿದ್ದರೂ ಸಹ, ಯಾವುದೇ ವ್ಯಕ್ತಿ ಅಥವಾ ಗುಂಪನ್ನು ಭಯೋತ್ಪಾದಕ ಎಂದು ಘೋಷಿಸುವ ಅಧಿಕಾರವನ್ನು ಸರ್ಕಾರಕ್ಕೆ ಈ ತಿದ್ದುಪಡಿ ನೀಡಿದೆ. ಇದರ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಸರ್ಕಾರಿ ಅಧಿಕಾರಿಗಳ ಸಮಿತಿಗೆ ವಹಿಸಲಾಗಿದೆ. ಆಶ್ಚರ್ಯವೆಂದರೆ ಈ ಸಮಿತಿಯ ಸದಸ್ಯರಿಗೆ ನ್ಯಾಯಾಂಗದ ಪರಿಣತಿ ಇರಬಹುದು ಅಥವಾ ಇಲ್ಲದೆಯೂ ಇರಬಹುದು.

ಇದಲ್ಲದೆ, 2019ರ ಎನ್‌ಐಎ ವರ್ಸಸ್ ವಟಾಲಿ (.) ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಅಡಿಯಲ್ಲಿ ಜಾಮೀನು ಅರ್ಜಿಗಳ ಬಗ್ಗೆ ನಿರ್ಧಾರ ಕೈಗೊಳ್ಳುವಾಗ ನ್ಯಾಯಾಲಯಗಳು ಪ್ರಾಸಿಕ್ಯೂಷನ್ (ಫಿರ್ಯಾದಿ ಪಕ್ಷ) ಮಂಡಿಸಿದ ವಾದವನ್ನು ಸತ್ಯವೆಂದೇ ಭಾವಿಸಬೇಕು ಎಂದು ತೀರ್ಪು ನೀಡಿದೆ. ಅಂದರೆ ಅಪರಾಧ ಸಾಬೀತುಪಡಿಸಲು ಪುರಾವೆಯೇ ಬೇಕಾಗಿಲ್ಲ. ಹಾಗೆಯೇ ಆರೋಪಿಗಳು ತಾವು ನಿರಪರಾಧಿಗಳು ಎಂದು ಸಾಬೀತುಪಡಿಸುವುದು ಇನ್ನಷ್ಟೂ ಕಷ್ಟ.

2023ರಲ್ಲಿ ಐಪಿಸಿ ಅಡಿಯಲ್ಲಿ ಅಪರಾಧ ಸಾಬೀತು ದರ ಶೇಕಡ 54ರಷ್ಟಿದೆ. ಆದರೆ ಯುಎಪಿಎ ಅಡಿಯಲ್ಲಿ ಅಪರಾಧ ಸಾಬೀತು ದರ ಬರೀ ಶೇ.3.2ರಷ್ಟಿದೆ. ಈ ಭಾರಿ ವ್ಯತ್ಯಾಸ ಕೇವಲ ಆಕಸ್ಮಿಕ ಅಂಕಿ-ಅಂಶವಲ್ಲ. ಯುಎಪಿಎ ಕಾನೂನು ಚೌಕಟ್ಟು ಎಷ್ಟು ಅಸ್ಪಷ್ಟವಾಗಿದೆ ಎಂದರೆ, ವಿಚಾರಣೆಯ ಹಂತದಲ್ಲಿರುವವರಿಗೆ ಜಾಮೀನು ಸಿಗುವ ಯಾವುದೇ ಸಾಧ್ಯತೆಗಳಿಲ್ಲ. ಇದರಿಂದಾಗಿ ನಿರಪರಾಧಿಗಳೂ ಜೈಲು ಪಾಲಾಗಬೇಕಾಗುತ್ತದೆ. ಅಂತಿಮ ತೀರ್ಪು ಬರುವ ಮುನ್ನವೇ ಅಮೂಲ್ಯ ವರ್ಷಗಳನ್ನು ಜೈಲಿನಲ್ಲೇ ಕಳೆಯಬೇಕಾಗುತ್ತದೆ. ಇದರಿಂದಾಗಿ ಅದೆಷ್ಟೋ ಬದುಕುಗಳು ಛಿದ್ರಗೊಳ್ಳುತ್ತದೆ, ಆರ್ಥಿಕ ವಿನಾಶ ಉಂಟಾಗುತ್ತದೆ.

ಅರ್ಥಶಾಸ್ತ್ರಜ್ಞರ ವಾದದಂತೆ ಈ ವ್ಯವಸ್ಥೆಯು ಬಹುಪಾಲು ಒಂದು ತೆರಿಗೆಯಂತೆಯೇ ಕಾರ್ಯನಿರ್ವಹಿಸುತ್ತದೆ. ಉದಾಹರಣೆಗೆ, ತನಿಖಾ ಪತ್ರಿಕೋದ್ಯಮದ ಪ್ರಯೋಜನಗಳು- ಅಂದರೆ ನಾಗರಿಕರಿಗೆ ಉತ್ತಮ ಮಾಹಿತಿ ಸಿಗುತ್ತದೆ, ಜನರಲ್ಲಿ ಹೊಣೆಗಾರಿಕೆ ಹೆಚ್ಚುತ್ತದೆ ಮತ್ತು ಆಡಳಿತಾತ್ಮಕ ವೈಫಲ್ಯಗಳ ತಿದ್ದುಪಡಿಯಾಗುತ್ತದೆ ಇವೆಲ್ಲವೂ ಇಡೀ ಸಮಾಜಕ್ಕೆ ಲಭಿಸುವಂತದ್ದು. ಆದರೆ, ಈ ಕೆಲಸಕ್ಕಾಗಿ ತಗಲುವ ಸಮಯ, ಅಪಾಯ ಮತ್ತು ಕಾನೂನಿನ ಸಂಕಷ್ಟಗಳಂತಹ ವೆಚ್ಚಗಳನ್ನು ಸಂಪೂರ್ಣವಾಗಿ ಆಯಾ ವ್ಯಕ್ತಿಯೊಬ್ಬನೇ ಭರಿಸಬೇಕಾಗುತ್ತದೆ. ಆದರೆ ಅದರ ಪ್ರತಿಫಲವನ್ನು ಮಾತ್ರ ಎಲ್ಲರೂ ಹಂಚಿಕೊಳ್ಳುತ್ತಾರೆ.

ಅಮೆರಿಕದ ಅರ್ಥಶಾಸ್ತ್ರಜ್ಞ ಪಾಲ್ ಸ್ಯಾಮ್ಯುಯೆಲ್ಸನ್ ಅವರು ಹೇಳುವಂತೆ ಸಮಾಜಕ್ಕೆ ಒಳಿತನ್ನು ಮಾಡುವ ಕೆಲವು ಕೆಲಸಗಳನ್ನು ಅಥವಾ ಸೇವೆಗಳನ್ನು ಕೇವಲ ಮುಕ್ತ ಮಾರುಕಟ್ಟೆಯ ಶಕ್ತಿಗಳಿಗೆ (ಅಂದರೆ ಕೇವಲ ಲಾಭ-ನಷ್ಟದ ಲೆಕ್ಕಾಚಾರಕ್ಕೆ) ಬಿಟ್ಟುಬಿಟ್ಟರೆ, ಸಮಾಜಕ್ಕೆ ನಿಜವಾಗಿ ಎಷ್ಟು ಅಗತ್ಯವಿದೆಯೋ ಅಷ್ಟು ಪ್ರಮಾಣದಲ್ಲಿ ಅವು ಉತ್ಪತ್ತಿಯಾಗುವುದೇ ಇಲ್ಲ. ಅದೇ ರೀತಿ, ಬ್ರಿಟಿಷ್ ಅರ್ಥಶಾಸ್ತ್ರಜ್ಞ ಆರ್ಥರ್ ಪಿಗು ಅವರ ವಾದದ ಪ್ರಕಾರ, ಯಾವ ಕೆಲಸಗಳಿಂದ ಇಡೀ ಸಮಾಜಕ್ಕೆ ಒಳ್ಳೆಯದಾಗುತ್ತದೆಯೋ, ಅಂತಹ ಕೆಲಸಗಳನ್ನು ಸರ್ಕಾರಗಳು ಪ್ರೋತ್ಸಾಹಿಸಬೇಕೇ ಹೊರತು ಅವುಗಳ ಮೇಲೆ ತೆರಿಗೆ ಹಾಕಿ ದಂಡಿಸಬಾರದು.

ಆದರೆ ಈ ಕಠಿಣ ಕಾನೂನುಗಳು ಆ ತರ್ಕವನ್ನೇ ತಲೆಕೆಳಗಾಗಿಸುತ್ತದೆ. ತಾವು ಸಮಾಜಕ್ಕೆ ಮಾಡುವ ಒಳ್ಳೆಯ ಕಾರ್ಯಕ್ಕಾಗಿ, ಸುದೀರ್ಘ ಬಂಧನ, ದಾಖಲಾದ ದೂರಿನ ಕಾನೂನು ಹೋರಾಟಕ್ಕಾಗಿ ವೆಚ್ಚ ಭರಿಸುವುದು, ಹೀಗೆ ಒಟ್ಟಾರೆಯಾಗಿ ಆರ್ಥಿಕ ವಿನಾಶದ ಭಾರವನ್ನು ಹೊರುವಂತೆ ಈ ಕಾನೂನು ಮಾಡುತ್ತದೆ. ಇದು ಸಾರ್ವಜನಿಕ ಸರಕುಗಳ ತೆರಿಗೆ ( ) ಅಲ್ಲದೆ ಮತ್ತೇನೂ ಅಲ್ಲ. ಅಂದರೆ ಸಮಾಜದ ಒಳಿತಿಗಾಗಿ ಧ್ವನಿ ಎತ್ತುವವರು, ಸಮಾಜದಲ್ಲಿರುವ ಇತರರು ಎಂದಿಗೂ ತೆರಬೇಕಾಗಿಲ್ಲದ ಭಾರೀ ಬೆಲೆಯನ್ನು ತೆರಬೇಕಾಗುತ್ತದೆ. ಅದಕ್ಕಾಗಿ ಈ ಕಾನೂನುಗಳನ್ನು ಬಳಸಿಕೊಳ್ಳಲಾಗುತ್ತದೆ.

ಒಟ್ಟಾರೆಯಾಗಿ ಸುಧಾರಣೆ ಎಂಬುದು ಒಂದು ಶಾಸನಾತ್ಮಕ ಕ್ರಮ. ಇಲ್ಲಿ ಸಂಪೂರ್ಣವಾಗಿ ರಾಜಕೀಯ ಇಚ್ಛಾಶಕ್ತಿ ಮುಖ್ಯ. ಭಯೋತ್ಪಾದಕ ಕೃತ್ಯ ಅಥವಾ ಕಾನೂನುಬಾಹಿರ ಚಟುವಟಿಕೆ ಎಂದರೆ ನಿಖರವಾಗಿ ಏನು ಎಂಬುದರ ಮಿತಿಯನ್ನು ಸ್ಪಷ್ಟಪಡಿಸುವ ಅಗತ್ಯವಿದೆ. ಹೀಗಾದರೆ ಮಾತ್ರ ನಿರಂತರ ಮತ್ತು ನಿಷ್ಪಕ್ಷಪಾತ ಕಾನೂನು ಜಾರಿ ಸಾಧ್ಯವಾಗುತ್ತದೆ. ವಟಾಲಿ ಪ್ರಕರಣದಲ್ಲಿ ರೂಪಿಸಲಾದ ಕಾನೂನುಗಳನ್ನು ಮರುಪರಿಶೀಲಿಸುವ ಅಗತ್ಯವಿದೆ. ಹಾಗೆಯೇ, ಈ ಕಾನೂನುಗಳ ಜಾರಿಯ ಮೇಲ್ವಿಚಾರಣೆ ನಡೆಸಲು ಒಂದು ಸ್ವತಂತ್ರ ಸಂಸ್ಥೆಯ ಅಗತ್ಯವೂ ಇದೆ.

ಇವೇನೂ ಕ್ರಾಂತಿಕಾರಿ ಸುಧಾರಣೆಗಳಲ್ಲ. ಬದಲಿಗೆ ಭಿನ್ನಾಭಿಪ್ರಾಯ ಹೊಂದಿರುವವರನ್ನು ಬಿಟ್ಟು ಕೇವಲ ಭಯೋತ್ಪಾದಕರನ್ನು ಮಾತ್ರ ಶಿಕ್ಷಿಸುವಂತಹ ನ್ಯಾಯಾಂಗ ವ್ಯವಸ್ಥೆಯ ಸಹಜ ಲಕ್ಷಣ. ದೇಶದ ದೇಶದ್ರೋಹ ಮತ್ತು ಭಯೋತ್ಪಾದನಾ ವಿರೋಧಿ ಕಾನೂನುಗಳನ್ನು ಹಲವು ಬಾರಿ ಅಷ್ಟೊಂದು ಹೆಸರುವಾಸಿಯಲ್ಲದವರ, ದಮನಿತರ ವಿರುದ್ಧವೇ ಪ್ರಯೋಗಗೊಂಡಿರುವುದು. ಹಾಗಾಗಿ, ಸಾಂವಿಧಾನಿಕವಾಗಿ ಮತ್ತು ಆರ್ಥಿಕವಾಗಿ ಎರಡೂ ದೃಷ್ಟಿಯಿಂದ ನೋಡಿದಾಗ ದೇಶದ ಭವಿಷ್ಯ ತೀರ ಅನಿಶ್ಚಿತವಾಗಿ ಕಾಣುತ್ತಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR